CC-O. In Public Domain. Digitized by eGangotri

ಕಾವ್ಯನಿಸರ್ಗ

ಗೀತಸಂಕಲನ

ಪುಣ್ಯಕೋಟಿ ಪ್ರ.ತಿ.ನ.ರವರ ಮುನ್ನುಡಿಯೊಡನೆ

ವಿಚಕ್ಷಣೆ ಪ್ರಾಸಾದ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವ್ಯನಿಸರ್ಗ

ಎಚ್. ಶೇಷಾದ್ರಿ

ಮುದ್ರಕರು :
ನವರತ್ನ ಪ್ರಿಂಟರ್ಸ್
ಸಿದ್ಧಾರ್ಥನಗರ ಮೈಸೂರು ೫೭೦ ೦೧೧

Sri Vidyabharathi Book Centre, Sringeri

CC-O. In Public Domain. Digitized by eGangotri

KAVYANISARGA--Kannada
(A collection of Poems) Written and Published by H. Sheshadri
2961/73 II main road, Saraswathi Puram, Mysore-570 009

Pages : 58

First Edition : February 1988

All Rights Reserved by the Author

Copies : 1,000

Price : Rs. 20

Printed by : NAVARATHNA PRINTERS
No. 355, IInd stage, Siddartha lay-out
MYSORE-570 011

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾರೈಕೆ

ಮನಸ್ಸು ಒಳ್ಳೆಯ ಪದದಲ್ಲಿರುವಾಗ ಭಾವಗಳು ಮುತ್ತುತ್ತವೆ, ಈ ಭಾವಗಳು ಆ ಮನಸ್ಸನ್ನು ವೈಭವೀಕರಿಸುತ್ತವೆ. ಈ ವೈಭವ ಸಂಪನ್ನವಾದ ಮನಸ್ಸನ್ನು ಜೀವ ಸಂತೋಷದಿಂದ ಎತ್ತಿ ಹಾಡಿ ಹಬ್ಬಗೈಯಲು ಸಡಗರಗೊಳ್ಳುತ್ತದೆ. ಆಗ ಕಬ್ಬವು ಮೂಡುವುದುಂಟು. ಹಾಗೆ ಮೂಡುವ ಕಬ್ಬಕ್ಕೆ ಮಿತ್ರ ಸಹೃದಯರು ಹಾಡಿ ಹರಸಿ ಸೇಸೆಯಿಕ್ಕುತ್ತಾರೆ. ಈ ಸಂಭ್ರಮ ಸಡಗರದ ಹರವು ಆ ಕವಿಯ ಸತ್ವ ಮತ್ತು ಸ್ನೇಹದ ಹರವಿನ ಆಳತೆಗಿರುತ್ತದೆ, ಈ ಕವನ ಸಂಗ್ರಹ ಇಂಥ ಒಂದು ಉತ್ಸವದ ಮತ್ತು ಸಹೃದಯೋತ್ಸಾಹದ ಪ್ರತೀಕವಾಗಿ ಪ್ರಕಟವಾಗುತ್ತಿದೆ.

ಶ್ರೀ ಶೇಷಾದ್ರಿಯವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲೇ ಕವಿತೆಯನ್ನು ಬರೆಯುವ ಪ್ರೇರಣೆಯನ್ನು ಪಡೆದು ಕೆಲವನ್ನು ರಚಿಸಿ, ಪತ್ರಿಕೆಗಳ ಅನಾದರದಿಂದ ಆ ಪ್ರವೃತ್ತಿಯನ್ನು ನಿಲ್ಲಿಸಿ ಬಿಟ್ಟರು. ಆದರೆ ಈಚೀಚೆಗೆ ಈ ಹುಟ್ಟು ಗುಣವನ್ನು ಸಂಪೂರ್ಣವಾಗಿ ಅಡಗಿಸಿಡಲಾಗದೆ, ಒಂದು ಕಾಗದದ ಚೂರಿನಲ್ಲೋ, ಹಾಳೆಯಲ್ಲೋ ಬರೆದು ತಾವಿರುವ ಟೆಲಿಫೋನ್ ಕಚೇರಿಯ ಮಿತ್ರರಿಗೆ ಓದಿ ತೋರಿಸಿ ಆಚೆಗೆಸೆದು ಬಿಡುತ್ತಿದ್ದರು. ಆ ರಸಿಕ ಮಿತ್ರರು ಈ ರಚನೆಗಳನ್ನು ಅಸಡ್ಡೆಯಿಂದ ಕಾಣದೆ ಆ ಚೂರುಗಳನ್ನು ಆಯ್ದು ಕಲೆಹಾಕಿದರು. 'ಚೆನ್ನಾಗಿವೆ' ಎಂದು ಬೆನ್ನು ತಟ್ಟಿದರು. ಪ್ರಬುದ್ಧ ಕರ್ನಾಟಕ, ಕಸ್ತೂರಿ, ಆಕಾಶವಾಣಿ ಮುಂತಾದ ಪ್ರತಿಷ್ಠಿತ ಸಂಸ್ಥೆಗಳು ಇವುಗಳಲ್ಲಿ ಕೆಲವನ್ನು ಪ್ರಕಟಿಸಿ ಆದರಿಸಿದವು. ಕೃತಿಕಾರರಿಗೆ ಉತ್ಸಾಹ ಮೂಡಿತು, ಈ ಕವನ ಸಂಗ್ರಹ ಸಿದ್ಧವಾಯಿತು. ಈಗ ನನ್ನ ಎರಡು ಒಳ್ಳೆಯ ಮಾತುಗಳನ್ನು ಗ್ರಂಥಕರ್ತರು ಬಯಸಿದ್ದಾರೆ. ಅದನ್ನು ಸಂತೋಷದಿಂದ ನೆರವೇರಿಸುತ್ತಿದ್ದೇನೆ.

ಇದರಲ್ಲಿ ನನಗೆ ಮುಖ್ಯವಾಗಿ ಕಂಡು ಬರುವುದು ಒಂದು ತಾಂತ್ರಿಕ ಸಂಸ್ಥೆಯ ನೌಕರರು ತಮ್ಮ ಸಹೋದ್ಯೋಗಿಯೊಬ್ಬನ ಸಾಹಿತ್ಯಕ ಒಲುವೆಯನ್ನು ಕಂಡುಕೊಂಡು ಆತನಿಗೆ ಹೀಗೆ ಪ್ರೋತ್ಸಾಹವನ್ನು ಕೊಡುವುದು. ಇದು ನನಗೆ ಬಹು ಹರ್ಷವನ್ನು ಕೊಡುವ ಸಂಗತಿ. ಯಾರಲ್ಲಿ ಯಾವ ಶಕ್ತಿ ಅಡಗಿದೆಯೋ ಕಂಡವರಾರು ? ಇಂಥ ಪ್ರೋತ್ಸಾಹನದಿಂದ ಕಾರ್ಖಾನೆಗಳಲ್ಲೂ ಒಬ್ಬ ಮಹಾಸಾಹಿತಿ, ಕವಿ ಹುಟ್ಟಬಹುದು. ಈ ಪ್ರೋತ್ಸಾಹನ ಪ್ರವೃತ್ತಿ ಎಲ್ಲೆಡೆಯೂ ಹಬ್ಬಲೆಂದು ನನ್ನ ಹಾರೈಕೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿನ ಕವನಗಳೆಲ್ಲ ಪ್ರಾಯಶಃ ಹಾಡಿನ ಧಾಟಿಯಲ್ಲಿವೆ. ಅಕ್ಷರ, ಅಂಶ, ಮಾತ್ರಾಗಣಗಳ ಅಭ್ಯಾಸದಿಂದಾಗಲಿ ತಾಳಲಯಗಳ ಶಿಕ್ಷಣದಿಂದಾಗಲಿ ಬಂದ ಹಾಗೆ ಕಾಣುವುದಿಲ್ಲ. ನಮ್ಮ ಜಾನಪದ ಹಾಗೂ ಹಾಡು, ಹಸೆಗಳ ಹಾಡುಗಳೆಲ್ಲವೂ ಈ ಧಾಟಿಗಳಲ್ಲಿವೆ. ಈ ಧಾಟಿಗಳನ್ನು ವಿಶ್ಲೇಷಿಸಿ ಶಾಸ್ತ್ರಕಾರರು ಹಲವಾರು ನಿಯತ ಪ್ರಮಾಣದ ಛಂದೋಗತಿಗಳನ್ನೂ ರಾಗಗಳನ್ನೂ ರೂಪಿಸಿರುವಂತೆ ತೋರುತ್ತದೆ. ಧಾಟಿಗಳಲ್ಲಿರುವ ಛಂದೋಲಯಗಳ ಕೊರತೆಯನ್ನೂ ಭಾವದೌರ್ಬಲ್ಯವನ್ನೂ ಹಾಡಿನರಾಗಗಳೂ, ವಿಳತೆಗಳೂ, ಕಾರುಗಳೂ ತುಂಬಿ ಬಿಡುತ್ತವೆ. ಹಾಗೂ ಬಹು ರಂಜಕವೆನಿಸುತ್ತವೆ. ಶ್ರೀ ಶೇಷಾದ್ರಿಯವರ ಆಶಯ ತಮ್ಮೀಕವಿತೆಗಳು ಹಾಡುಗಳಾಗಿ ಶ್ರಾವ್ಯವಾಗಬೇಕೆಂದು. ಈ ಕ್ಯಾಸೆಟ್ಟಿನ ಯುಗದಲ್ಲಿ ಇದೇನೂ ದುರ್ಲಭವಾದ ಕಾಮನೆಯಲ್ಲ. ಅವರ ಇಷ್ಟಾರ್ಥ ಬೇಗ ಸಿದ್ಧಿಸಲೆಂದು ನಾನು ಹಾರ್ದವಾಗಿ ಹಾರೈಸುತ್ತೇನೆ.

ಶ್ರೀ ಶೇಷಾದ್ರಿಯವರದು ಕವಿ ಹೃದಯ. ಪ್ರಕೃತಿಯನ್ನು ನೋಡಿ ಸುಖ ಪಡಬಲ್ಲವರು. ಭಿಕ್ಷುಕನ ದಾರುಣ ಪ್ರೀತಿರಹಿತ ಬದುಕಿಗೆ ಮರುಗಬಲ್ಲರು. ಕೋಲೆಬಸವನನ್ನು ಕೌತುಕದಿಂದ ನೋಡಿ ಸಂತೋಷಪಡುವ, ಹರಕೆ ಸಲ್ಲಿಸಲು ಹೋಗಿ ಕೆಂಡ ಹಾಯ್ದು ಬೆಂದು ಹೋಗುವ ಮದುವಣಿಗನನ್ನೂ, ಅತನ ಎಳೆಯ ವಿಧವೆಯನ್ನೂ ಕಂಡು ಕಡು ವಿಷಾದದಿಂದ ನೊಂದುಕೊಳ್ಳುವ, ಆಗಾಗ ಜ್ಞಾನ ವೈರಾಗ್ಯ ನೀತಿಧರ್ಮಗಳ ಗಹನಾರಣ್ಯದಲ್ಲಿ ಕುತೂಹಲದಿಂದ ಇಣುಕಿ ನೋಡುವ, ಈ ನಾಡನ್ನೂ ಹೊಳೆ ಮಲೆ ಕಾಡು ಹಕ್ಕಿ ಹೂಗಳನ್ನೂ ಕುರಿತು ಮನತುಂಬ ವರ್ಣಿಸುವ ದೈವ ಭಕ್ತಿಯನ್ನೂ ಸೂಸುವ ಉಲ್ಲಸಿತರಾಗಿ ಹಾಡು ಕಟ್ಟಿ ಆನಂದಿತರಾಗುವ ಜಾಣ್ಮೆ ಇವರದಾಗಿದೆ. ಈ ಗುಣ ಸಾಮಾನ್ಯವಾಗಿ ಲಭಿಸುವಂಥದಲ್ಲ ! ಈಗಿನೆ ಜಗತ್ತಿನಲ್ಲಿ ಸಂತೋಷ ಸಮಾಧಾನ ಮರುಕಗಳು ಮೃಗ್ಯ, ಇವನ್ನು ಹೆಚ್ಚಿಸುವುದು ಸಾಮಾನ್ಯವಾದ ಕೆಲಸವಲ್ಲ. ಈ ಕಾರ್ಯದಲ್ಲಿ ಪ್ರವೃತ್ತರಾಗುವವರೆಲ್ಲರೂ ಈಶ್ವರನ ಪ್ರೀತಿಗೆ ಪಾತ್ರರಾಗ ತಕ್ಕವರು. ಶ್ರೀ ಶೇಷಾದ್ರಿಯವರಿಗೆ ಈ ದಿಸೆಯಲ್ಲಿ ನಡಗೆಯುಂಟು. ಈ ಕೃತಿ ಅದನ್ನು ದ್ಯೋತಿಸುತ್ತದೆ. ಅವರಿಗೆ ಯಶ ಕೋರುತ್ತೇನೆ. ಕಣ್ಣಿಗೆ ಗೋಚರಿಸುವ ಈ ರಚನೆಗಳಲ್ಲಿ ಹಲವಾರು ಕವಿಗೂ ಗೋಚರಿಸಿ ಹರ್ಷಗೊಳಿಸಲಿ ಎಂದು ಹಾರೈಸುತ್ತೇನೆ.

ದಿನಾಂಕ : 29-10-87

ಪು.ತಿ.ನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶೀರ್ವಚನ

ಶ್ರೀ ಎಚ್. ಶೇಷಾದ್ರಿಯವರ ಚೊಚ್ಚಲು ಕವನ ಸಂಗ್ರಹ 'ಕಾವ್ಯನಿಸರ್ಗ' ಹೊರಬರುತ್ತಿರುವುದು ಸಂತೋಷದ ಸಂಗತಿ. ಇಲ್ಲಿನ ಹಲವು ಪದ್ಯಗಳು 'ಆಕಾಶವಾಣಿ' ಯ ಮೂಲಕ ಬಿತ್ತರವಾಗಿವೆ ; ಮತ್ತು 'ಕಸ್ತೂರಿ' 'ಪ್ರಬುದ್ಧ ಕರ್ನಾಟಕ' ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇಲ್ಲಿನ ಇಪ್ಪತ್ತೈದು ಪದ್ಯಗಳೂ ವಸ್ತುವಿನ ಹಾಗೂ ಭಾಷೆಯ ದೃಷ್ಟಿಯಿಂದ ವೈವಿಧ್ಯಮಯವಾಗಿವೆ. ಇಲ್ಲಿನಹಲವು ಪದ್ಯಗಳು ಹಾಡುವ ಅನುಕೂಲಕ್ಕೆ ಒಗ್ಗಿಕೊಳ್ಳುವಂಥವು. ಈ ಮಿತ್ರರ ಸದರಿ ಕವನಗಳು ಜನಪ್ರಿಯವಾಗಲೆಂದು ಹಾಗೆಯೇ ಅವರಿಂದ ಇನ್ನೂ ಹಲವು ಕವನ ರಚನೆಗಳು ಆಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಬೆಂಗಳೂರು
31-12-87

ಪ್ರೊ|| ಕೆ.ಎಸ್. ನಿಸಾರ್ ಅಹಮದ್

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿಕೆ

ನಲ್ಮೆಯ ಓದುಗರೇ,

ಪ್ರಕೃತಿಯ ಭಾಪೋಜ್ವಲವಾದ ಸ್ವರೂಪ, ರಸಾನುಭೂತಿ. ರಸಪಥವೇ ಸತ್ಯ. ಅಣುರೇಣು ತೃಣಕಾಷ್ಟದಿಂದ ಮಾನವ ಚೈತನ್ಯದವರೆಗೆ ಸಮಸ್ತವೂ ಸೃಷ್ಟಿಶಕ್ತಿಯ ಫಲಿತ. ಸಂಜೆಗೆಂಪು, ಕುಸುಮಗಳ ಕಂಪು, ಪೆಂಪು, ತಿರೆ, ಸರಸ್ಸು, ಮಲೆ, ಕಾಡು, ಪಕ್ಷಿ ಸಂಕುಲ, ವನ್ಯಜೀವಿಗಳು, ಮಿಂಚು, ಕರಿಮೋಡಗಳ ದಟ್ಟಣೆಗಳೇ ಮೊದಲಾಗಿ ಪ್ರಕೃತಿಯ ವಿಧ ವಿಧ ಚೆಲುವು ನೋಟಗಳಿಂದಾದ ಆನಂದಾನುಭವದ ಒಂದು ಪ್ರಕಟಣೆಯೇ ಕಾವ್ಯ. ಮಧುರ ಭಾವದ ರಸದೊರತೆಯಿರುವ ತನಕ ನಿರರ್ಗಳವಾಗಿ ಹರಿದು ಬರುವ ಶಬ್ದ ಬ್ರಹ್ಮಲೀಲೆ.

ಇವೆಲ್ಲವನ್ನೂ ವೀಕ್ಷಿಸುತ್ತಿರುವ ನೀವೂ ನಾವೂ ಈ ನಿಸರ್ಗದ ಒಂದು ಅವಿಭಾಜ್ಯ ಅಂಗವಾಗಿದ್ದೇವೆ. ರಸ, ಭಾವ, ಧ್ವನಿಗಳು, ಅಯತ್ನ ಪೂರಕವಾಗಿ ಹರಿದು ಬರುವ ಪ್ರಕೃತಿ ಗೀತದ ಜೀವಾಳ. ಆ ನಿಸರ್ಗದೈಸಿರಿಯ ಬೆಡಗೇ ಛಂದಸ್ಸಿನ ಬಿಗಿ ಹಿಡಿತವನ್ನು ಮೀರಿ ಓತಪ್ರೋತವಾಗಿ ಕಾವ್ಯದ ಪೂರವಾಗಿ ದುಮ್ಮಿಕ್ಕಿ 'ಕಾವ್ಯನಿಸರ್ಗ'ವಾಗಿ ಹೊರಬಂದಿದೆ.

ಜನಸಾಮಾನ್ಯರಿಗೆ ಹಿತವೆನಿಸುವ ಸರಳಸಾಹಿತ್ಯ ರಾಗ, ರಸ, ಭಾವ, ಸ್ವರಗಳಿಗೆ ಹೆಚ್ಚು ಒತ್ತುಕೊಡಲಾಗಿ ಗಾನದ ಗುಂಗಿನಲ್ಲಿ ನರ್ತಿಸುವಂತಿರುವ ಗೀತಗಳು ಛಂದಸ್ಸಿನಿಂದಲೇ ಕಳಚಿಕೊಂಡಿರುವುದು ನನಗೆ ತುಸಬೇಗುದಿಯಾಗಿದ್ದರೂ, ನಾಡ ಹಿರಿಯ ಕವಿಗಳ ಆಶೀರ್ವಾದ, ಪ್ರೋತ್ಸಾಹಗಳಿಂದ ನನಗೆ ಧೈರ್ಯ ಬಂದಿದೆ.

ನನ್ನ ಕಾವ್ಯ ನೌಕೆಯ ಚುಕ್ಕಾಣಿಯನ್ನು ಇನ್ನು ನಲ್ಮೆಯ ಓದುಗರ ದಿಶೆಗೆ ತಿರುಗಿಸಲು ಯತ್ನಿಸುವ ಭರವಸೆಯನ್ನು ನೀಡುತ್ತಾ, ಈ ನನ್ನ ಪ್ರಯೋಗಾತ್ಮಕ ರೀತಿಯನ್ನು ಮನ್ನಿಸಿ ಸಮರ್ಪಿತ ಕಾವ್ಯವನ್ನು ಸ್ವಾಗತಿಸುತ್ತೀರೆಂದು ನಂಬಿ, ವಂದಿಸುವ

ದಿನಾಂಕ : 15-1-88
ಮೈಸೂರು–570 009

ನಿಮ್ಮ ವಿಧೇಯ
ಎಚ್.ಶೇಷಾದ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಜ್ಞತೆಗಳು

ನನ್ನ ಈ ಕಿರುಹೊತ್ತಿಗೆಗೆ ಕೃಪೆಯಿಟ್ಟು ಮುನ್ನುಡಿಯನ್ನು ಬರೆದು ಕೊಟ್ಟು ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿ ಆಶೀರ್ವದಿಸಿದ ಗುರುಪರ್ಯರಾದ ಪೂಜ್ಯ ಶ್ರೀ ಪು. ತಿ. ನರಸಿಂಹಾಚಾರ್ಯರವರಿಗೂ ಹಾಗೂ ಕನ್ನಡ ಸಾರಸ್ವತ ಲೋಕಕ್ಕೆ ನನ್ನನ್ನು ಪರಿಚಯಿಸಿದ ಶ್ರೀಮಾನ್ ಎಚ್ಚೆಸ್ಕೆರವರಿಗೂ ನನ್ನ ಕೃತಜ್ಞತೆಗಳನ್ನು ಈ ಮೂಲಕವಾಗಿ ಅರ್ಪಿಸುತ್ತಿದ್ದೇನೆ.

ನನ್ನನ್ನು ಆಶೀರ್ವದಿಸಿ ಉತ್ತೇಜನ ನೀಡಿದ ನಾಡಿನ ಹಿರಿಯ ಕವಿ-ಸಾಹಿತಿಗಳಾದ ಸರ್ವ ಶ್ರೀ ಅನಂತನಾರಾಯಣ, ನಿಸ್ಸಾರ್ ಅಹಮದ್, ಲಕ್ಷ್ಮೀನಾರಾಯಣಭಟ್ಟ, ಸಿ. ಪಿ. ಕೃಷ್ಣಕುಮಾರ್, ಪಿ. ಎಸ್. ರಾಮಾನುಜಂ ಮತ್ತು ಪ್ರಧಾನ್ ಗುರುದತ್ ರವರಿಗೂ ನಾನು ಈ ಮೂಲಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಕವನಗಳು ಹಾಗೂ ಲೇಖನಗಳ ಪ್ರಕಟಣೆಗಳ ಮೂಲಕ ಓದುಗರಿಗೆ ನನ್ನ ಪರಿಚಯ ಮಾಡಿಸಿದ ಪ್ರತಿಷ್ಠಿತ ಸಂಸ್ಥೆಗಳಾದ 'ಮೈಸೂರು ಆಕಾಶವಾಣಿ', 'ಕಸ್ತೂರಿ', 'ಪ್ರಬುದ್ಧ ಕರ್ನಾಟಕ' ಹಾಗೂ 'ವಾರಪತ್ರಿಕೆ' ಗಳಿಗೆ ನನ್ನ ಅನಂತ ಕೃತಜ್ಞತೆಗಳನ್ನು ಈ ಮೂಲಕ ಅರ್ಪಿಸುತ್ತಿದ್ದೇನೆ.

ನನ್ನ ಈ ಗೀತಸಂಕಲನವನ್ನು ಅಂದವಾಗಿ ಮುದ್ರಿಸಿಕೊಟ್ಟ ನವರತ್ನ ಪ್ರಿಂಟರ್ಸ್‌ರವರಿಗೂ ಹೊರಹೊದಿಕೆಯ ತ್ರಿವರ್ಣ ಚಿತ್ರದ ರೂಪಕ ಶ್ರೀ ವೆಂಕಟೇಶ್ ಹಾಗೂ ಪಡಿಯಚ್ಚುಗಾರರಾದ ಪ್ರೊಸೆಸ್ ಸೆಂಟರ್‌ರವರಿಗೂ ನನ್ನ ಅನಂತ ಕೃತಜ್ಞತೆಗಳು. ನನ್ನನ್ನು ಪ್ರೋತ್ಸಾಹಿಸಿ ಈ ಸುಂದರ ಹೊತ್ತಿಗೆಯನ್ನು ಹೊರತರಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿಯೂ ಶ್ರಮಿಸಿದ ದೂರವಾಣಿ ವಿಭಾಗದ ನನ್ನ ಎಲ್ಲ ಸಹೋದ್ಯೋಗಿ ಮಿತ್ರರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಎಚ್.ಶೇಷಾದ್ರಿ

ವಿ. ಸೂ.—ಓದುಗರು ಕೃಪೆಯಿಟ್ಟು ತಿದ್ದುಪಡಿಯನ್ನು ಅಳವಡಿಸಿಕೊಂಡು ಓದಿ ಕೊಳ್ಳಬೇಕಾಗಿ ಪ್ರಾರ್ಥನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಿಡಿ

ವನಮಾಲಿ/1
ಪುನರ್ಜನ್ಮ/3
ಯಾನ/4
ಭಿಕ್ಷುಕ/5
ಮಯೂರ ನರ್ತನ/6
ಕೊಡಗಿನ ಬನದಲ್ಲಿ/7
ಮಯೂರ ಕೋಕಿಲ ಸಂವಾದ/8
ಋಷ್ಯಮೂಕ/10
ಕೋಲೆಯ ಬಸವಯ್ಯ/12
ಹೊಗೆಯು ಎದ್ದಿದೆ/14
ಮಾದಯ್ಯನ ಕರಗ/15
ನಶ್ವರತೆ/18
ಮಹಾತ್ಮ/20
ಶಾರದೆ/22
ಮುಂಜಾವು/24
ಹಾರಂಗಿ/25
ಸುಪ್ರಭಾತ/26
ಸ್ಫಟಿಕಶುದ್ಧೆ/28
ಕಡಲತೀರದಲ್ಲಿ ವರ್ಷರಾತ್ರಿ/29
ಪಂಪಾತಟಾಕಂ/30
ವಸಂತೋತ್ಸವ/32
ಭಾರತ–ಒಂದು ಅದಮ್ಯ ಚೇತನ/34
ಬೆಲೆಯ ಸುರುಳಿ/35
ಹಾಳುಹಂಪೆಯ ಉಗ್ರನೃಸಿಂಹ/36
ಕರ್ನಾಟಕ ಶಿಲ್ಪ ವೈಭವ/38

Sri Vidyabharathi Book Centre, Sringeri

CC-O. In Public Domain. Digitized by eGangotri

ವನಮಾಲಿ

ಕೊಳಲಿನ ಗಾನವ ಕೇಳಿಸು ಹೇ ವನಮಾಲಿ
ಎನ್ನನು ಕರುಣಾರಾಗದಿ ತೇಲಿಸು ನೀ ॥ಪ॥

ಒಲ್ಲದ ಆವುದೊ ಮನಸಿನಲಿ
ಮೇಯುತ ಸಾಗಿಹ ತುರುಗಳಲಿ
ಕಾಣದ ಹೇಳದ ಯುಗಾಂತರ ನೋವೋ
ಕಣ್ಣಂಚಲಿ ನೀರನು ಮಿಡಿದಿವೆಯೋ ॥೧॥

ಕೊಳಲಿನ ಗಾನವ ಎಲ್ಲೋಕೇಳಿದೆವೆಂದೋ
ಎನಿತೋ ಯುಗಗಳ ಸಂದಿವೆ ಎಂದೋ
ಮೇವುದ ನಿಲ್ಲಿಸಿ ಕಿವಿಗಳನಿಮಿರಿಸಿ
ಕೊರಳನು ಏರಿಸಿ ಆಗಸ ಗಮನಿಸಿ ॥೨॥

ದ್ವಾಪರ ಯುಗದ ನಿನ್ನುಸುರಿನ ಗಾನ
ನೆನಪಿಗೆ ಬಂದು ಕಾಡಿಹುದೇನ
ಬಿಸುಸುಯ್ಲಲಿ ನೆಲವನೆ ಸುಮ್ಮನೆ ನೋಡಿ
ತಪಿಸುತ ತವಕದೆ ನಿಂತಿವೆ ಬೇಡಿ ॥೩॥

ಉತ್ತಮಾಂಗದೆ ಹೊನ್ನಕಿರೀಟ
ನವಿಲಗರಿಯಲಿ ಮೆರೆದಿಹ ನೋಟ
ಪೀತಾಂಬರದಲೆ ಕಂಡೆ ಗೋಪಾಲೀ !
ಕೊಳಲನು ಪಿಡಿದಿಹೆ ಅದುವೆ ಶೈಲಿ ! ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಳೆಲೆ ಮಾಂಗಾಯಿ ಮುತ್ತಿನ ಸರದಲಿ
ನಿಂಚಿಹ ಒಡಲೊ ಮೇಘದ ನೀಲಿ !
ಸಂಮೋಹಕ ನಗೆಯ ನಿಲುವಲಿ ನೀನು
ಒಮ್ಮೆ ವೇಣು ನಾದದಿ ದ್ವಾಪರ ತೋರು ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನರ್ಜನ್ಮ

ಆವ ಜನುಮದ ಪ್ರಿಯೆಯೊ ಕಾಣೆ
ಎನ್ನ ಬಳಿಯ ಸೇರಲು
ಸುಗಂಧಿತ ಸುಂದರ ಕುಸುಮವೆನಿಸಿ
ಎನ್ನ ಮನವ ತಣಿಸಿದೆ ।೧।

ಎದೆಯ ತಂತಿಯು ಒಲವ ಗೀತಕೆ
ಹೃದಯರಾಗ ಮಿಡಿದಿದೆ
ಪ್ರೇಮ ಬಾಷ್ಪವು ಹಿಮದ ಹನಿಯೊಲು
ಕುಸುಮ ಪಟಲದಿ ಮೂಡಿದೆ ।೨।

ಜನುಮ ಸಾರ್ಥಕವಾಗಲೆನ್ನುತ
ಹೂವ ದೇವಗೆ ಅರ್ಪಿಸಿ
ಆತ್ಮವು ದೇಹವು ಒಂದೆಯಾದರೂ ಒಂದೆ
ಹರಿಯ ಪದತಲಕೆಳಸಿದೆ ।೩।

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾನ

ಹೋ ಹೋ ಹೋ ಕಡಲ್ಹೋಗೆ ಮೊರೆಯುತಿದೆ ನೋಡು ಅಲ್ಲಿ
ನಿನ್ನ ನಾವೆಯ ಚುಕ್ಕಾಣಿ ಭದ್ರವಿರಲಿ ॥೫॥

ಮುಕುತಿಯ ತೀರವದು ಬಲು ದೂರ ದೂರ
ದವಸ ಬೇಕಾಗಿಹುದೆ ಪುಣ್ಯಕರ್ಮದ ಭಾರ
ಸಿಹಿಯ ಪಾಕದಿ ಬೆಸೆದ ಈ ಷಡ್ರಂಧ್ರನಾವೆ
ಯಾನದುಗಮದೆ ಕಾಣ್ವ ಸುಖವೆಲ್ಲ ಮಾಯೆ ॥೧॥

ನಿನ್ನ ನಾವೆಯ ವೇಗದಲಿ ಉಂಟು ಏರಿಳಿತ
ಇರುವಂತೆ ಅಬ್ಬರಗಡಲಿನ ಭರತ ಇಳಿತ
ದಟ್ಟ ಕಾರ್ಮೋಡ ಮುಗಿಬಿದ್ದ ಕಾರ್ಗತ್ತಲು
ಆತಿರುದ್ರ ಕಡಲಿನ ಭೀಕರದ ಹುಯಿಲು ॥೨॥

ಕಾಲು ಯಾನದಲೆ ಕುಂಡಿಹುದು ತೇವರಂಧ್ರ
ಹೊರಟಾಗ ಕಾಣದಿಹ ಆ ಮಾಯ ರಂಧ್ರ !
ಆಗಲೆ ಎದ್ದಿಹುದು ಆ ಭಕ್ತಿಯ ಚಂಡಗಾಳಿ
ಹಾಳೆ ದಾಹ ಕಣ್ಣತ್ತಲೆಯ ಜರ್ಜರಿತ ಛಾಳಿ ॥೩॥

ಸಿಹಿಲೆಪ್ಪ ಕರಗಲಿದೆ ರಭಸದಿ ನುಗ್ಗಿಸಿ ಉಪ್ಪುನೀರ
ಜೋಲಿ ತಪ್ಪಲಿದೆ ಸುಯಮದ ಚುಕ್ಕಾಣಿ ! ನೀ ಎಚ್ಚರ !
ಅದಕೆ ಮುನ್ನವೇ ನೀ ತುಂಬಯ್ಯ ವಜ್ರ ಲೇಪ
ವೈರಾಗ್ಯ ಭಕ್ತಿ ಜ್ಞಾನಗಳ ಕಾಪು ಇದು ಲೇಪ ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಿಕ್ಷುಕ

ವಿಧಿಯಾಘಾತದ ಬಲಿಪಶು ನಾನು
ಭಿಕ್ಷುಕನೆಂಬೀ ಮಾನವನು ।ಪ।

ತೇವಕಂಗಳ ಅಳುವ ಕಂದಗೆ
ಬೋನ ಉಣಿಸುತ ಮಿಡಿವ ಹೃದಯಕೆ
ಮನದೆ ನಮಿಸಿ ಹೀರಿದೆ ಪ್ರೀತಿಯೆಲ್ಲಾ
ನಾನು ಮಗುವೆಣಿಸಿ ನನಗೆ ತಾಯಿ ಇಲ್ಲಾ ।೧।

ಮುದದಿ ಕಂದಗೆ ಹಾಲನೂಡುವ ಆವ
ಮಡಿಲಲ್ಲಿ ಕಂಡೆನು ಶೈಶವದ ಭಾವ
ಎತ್ತಿಯಾಡಿಸುವ ಸಂತಸವಾ ತಂದೆ ಬಲ್ಲ
ನಾನೆ ಮಗುವೆಣಿಸಿ ನಕ್ಕೆ ಎನಗೆ ತಂದೆ ಇಲ್ಲ ।೨।

ಮಳೆ ಬಿಸಿಲು ನಿಂದೆ ತಾತ್ಸಾರ
ಈ ದೇಹಕ್ಕೊಗ್ಗಿರುವ ಆಹಾರ
ಕದವಿಕ್ಕಿದಾ ಅಂಗಡಿಯ ಜಗಲಿ
ನನ್ನ ಮನೆಯದುವೆ ರಾತ್ರಿಯಲಿ ।೩।

ಹಿಂದಿಲ್ಲ ಮುಂದಿಲ್ಲ ಮನೆಯಿಲ್ಲ
ಮಠವಿಲ್ಲ ಜನರ ಈ ಬೊಬ್ಬೆಗರ್ಥವಿಲ್ಲ ।
ಲೋಕದ ನೀವೆಲ್ಲ ಅಣ್ಣ ತಂಗಿಯರೆಲ್ಲ
ನನಗಾಗೆ ತೆರೆದಿಹುದು ವಿಶಾಲಜಗವೆಲ್ಲ ।೪।

Sri Vidyabharathi Book Centre, Sringeri

CC-O. In Public Domain. Digitized by eGangotri

ಮಯೂರ ನರ್ತನ

ಇನಿಯೆ ಬಾರೆ ಮೇಘನಿನಾದ ಮೊಳಗಿದೆ
ಥಳಥಳಿಸುತ ಮಿಂಚು ಕರೆದಿದೆ ಕರೆದಿದೆ ॥ಪ॥

ಓಲೈಸಿದೆ ತುಂತುರು ಮಳೆಹನಿ ಹನಿದಿದೆ
ಮಂದಾನಿಲ ಬೀಸಿದೆ ಮಧುರ ಗೀತ ಮೊಳಗಿದೆ
ಹೊಂಗಿರಣ ಜಾರುತಿದೆ ನಿಶೆಯುತಾ ಇಣುಕಿದೆ
ಚಂದ್ರಮೆ ತಾ ನಾಚುತ ನೀಡದಿಹಳು ದರುಶನ (ಗಂಡು) ॥೧॥

ಚರಣ ॥

ನಿಸರ್ಗದ ದೇವದುಂಧುಬಿ ಆ ಮೇಘನಾದವು
ಪುಷ್ಪಮಾಲಿಕಾ ಆ ಮಿಂಚಿನಾ ಲತೆ (ಗಂ) ॥೨॥

ಮಕರವೀಂಟುತಾ ನೃತ್ಯಗೈವ ಭೃಂಗವು
ಹರಿಣಿಯಾಟವು ಎಂಥ ಮಧುರ ನೋಟವು (ಹೆ) ॥೩॥

ಕ್ಷಾಂಚಯುಗ್ಮವು ಎಂಥ ರಮ್ಯ ಬಂಧನ
ಮಯೂರ ನರ್ತನ ವರ್ಷಪ್ರೇಮ ಸಿಂಚನ (ಗಂ) ॥೪॥

ಈ ಪ್ರೇಮ ಸಂಹಿತೆ ಆ ಮಾರನಿಂಗಿತ
ಆ ದಿವ್ಯ ಸೃಷ್ಟಿಗೆ ಎಮ್ಮ ನಮನ ಸಂತತ (ಒಟ್ಟಿಗೆ) ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡಗಿನ ಬನದಲ್ಲಿ

ಸ್ವಾತಂತ್ರ್ಯಧೀರರ ಮಾತೆ ಎಮ್ಮ ಕೊಡಗಿದು
ಹಿಮದಿ ತೊಯ್ದ ಹಸಿರು ಬನವ ನೋಡ ಎನಿತು ಬೆಡಗಿದು ॥ಪ॥

ಹಸುರ ಗುಡ್ಡ ಸಾಲು ನೋಡ ಎನಿತು ಚಂದವಾಗಿದೆ
ಚಂದನದ ಕಾಡು ಅದುವೆ ಎನಿತು ಗಮವ ತಂದಿದೆ
ಕಿತ್ತಲೆಯ ಗಿಡಗಳಲ್ಲಿ ಹಣ್ಣು ಎನಿತು ತೂಗಿವೆ
ಕಾಫಿ ಗಿಡಗಳ್ಹೂವ ಚೆಲ್ಲಿ ಪ್ರಕೃತಿ ದೇವಿಗೆರಗಿದೆ ॥೧॥

ಮುಂಜಾವದುವೆ ಮರೆಯಲಾರೆ ರಮ್ಯನೋಟ ಮೂಡಿಸಿ
ಬಿಸಿಲುಕೋಲು ತೂರುತಲಿ ಮಂಜು ಸೆರಗ ಸೀಳಿದೆ
ಹಿಮದ ಕನ್ನೆ ಲಜ್ಜೆಯಿಂದ ದೂರ ದೂರ ಸರಿಯುತಾ
ಮೆಲ್ಲ ಮೆಲ್ಲ ರವಿಯ ನೇತ್ರ ಮೇಲ ಮೇಲಕೇರುತಾ ॥೨॥

ಕಿಲಕಿಲನೆ ನಗುತವೆಲ್ಲ ನೆರೆದ ಪಕ್ಷಿಸಂಕುಲ
ಆವಳೋಡಿಯೆಲ್ಲಿ ಹೋದಳೆಂದು ಹಿಂದೆ ಎಲ್ಲ ಹಾರಿವೆ
ಆವಳು ಹೋದ ಎಡೆಯಲೆಲ್ಲಾ ಎನಿತು ಗಮ ಹರಡಿದೆ
ಮಲ್ಲಿಗೆ ಪಾರಿಜಾತ ಜಾಜಿ ಕೆಂಪು ಒಸರಿದೆ ॥೩॥

ಆವಳ ನೋಡಿ ಉಬ್ಬಿಹೋಗಿ ರಂಭೆ ಎಂದೇ ಊಹಿಸಿ
ಶ್ವೇತ ಮೇಘ ಮಾಲೆ ಮೇಲೆ ಎಲ್ಲವನ್ನೂ ವೀಕ್ಷಿಸಿ
ಕಣ್ಣ ತಪ್ಪಿಸೆನ್ನ ನೀನು ಬಿಟ್ಟು ಹೇಗೆ ಓಡುವೆ
ಬನ್ನಿರೆನ್ನ ಹಿಂದೆ ಎಂದು ತಾವು ಮುಂದೆ ತೇಲಿವೆ ! ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಯೂರ-ಕೋಕಿಲ ಸಂವಾದ

ಮಧು ಮಾಸವ ಸಾರುವ ಕೋಗಿಲೆಯೇ
ನಿನ್ನ ಕೋಮಲ ಕಂಠವೇಕೆನಗಿಲ್ಲ
ಇನಿಕಂಠದ ಇಂಪಿಗೆ ನರ್ತಿಸುವೆ (ಮ)
ನಿನ್ನ ಗಾನದ ಗುಂಗಲಿ ಮೈಮರೆವೆ ॥೧॥

ಗರಿಗೆದರುತ ನರ್ತಿಪ ಓ ನವಿಲೇ
ನಿನ್ನ ಬಿಡಗಿನ ಗರಿಗಳೇಕೆನಗಿಲ್ಲ
ನಾ ಮಾವಿನ ಚಿಗುರನು ಮೆಲ್ಲುತಲಿ (ಕೊ)
ರಮಣೀಯ ನಿಸರ್ಗವ ಸ್ತುತಿಸಿಹೆನು ॥೨॥

ಕಪ್ಪನೆ ಮೋಡಗಳಂಚಿನಲಿ
ಆ ಥಳುಕುವ ಮಿಂಚಿನ ಮೋಡಿಯಲಿ
ನನ್ನ ನಾಟ್ಯದ ಹಿನ್ನೆಲೆ ಗಾಯಕಿ ನೀ
ಪಿಡಿದಿಹೆ ನರ್ತನ ಸೂತ್ರಿಕೆಯ ॥೩॥

ಆವುದೊ ಗೀತದ ಮೆಲ್ಲುಲಿಗೆ
ನಿನ್ನ ನರ್ತನ ತಾಳಕೆ ಶ್ರುತಿಯಾದೆ
ಮೋಹಕ ನೃತ್ಯದಿ ನೀ ಗೆಲಿದೆ (ಕೊ)
ಸಮ್ಮೋಹಕ ಸಾವಿರ ಕಂಗಳಲಿ ॥೪॥

ನಿನ್ನಯ ಶ್ರುತಿಗೇಕೆನ್ನಯ ತಾಳ
ಎನ್ನಯ ತಾಳಕೇಂ ನಿನ್ನಯ ಶ್ರುತಿಯು
ತಾಳವು ಶ್ರುತಿಯು ಸರಿಹೊಂದಿವೆ ನೋಡ (ಮ)
ಸುರಗೀತಕೆ ಸ್ಪಂದಿಸಿ ಉದಿಸಿಹ ಮೇಳ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವ್ಯ–ನಿಸರ್ಗವೆ ಹೊನಲಾಗಿ
ಕರ್ಣಾಮೃತ ಗಾನದ ಸುಧೆಯಾಗಿ
ಗಾಯಕ ಕವಿಗಣ ಮೇಳೈಸಿ (ಒಟ್ಟಿಗೆ)
ಇಳಿಸಿದೆ ಸ್ವರ್ಗವ ನೀ ಧರೆಗೆ ॥೬॥

Sri Vidyabharathi Book Centre, Sringeri

CC-O. In Public Domain. Digitized by eGangotri

ಋಷ್ಯಮೂಕ

ನೇಸರನೋಕುಳಿ ಹಸುರಿನ ತೋರಣ
ದಟ್ಟಡವಿಯಲಾವುದೊ ಸಂಕ್ರಮಣ
ಸಿಂಹದ ಘರ್ಜನೆ ಇಭ ಘೀಂಕಾರ
ಮಾರ್ದನಿಗೈದಿದೆ ಆ ಗಿರಿಕಂದರ ೧೧

ಕೃಷ್ಣಾಮೃಗಗಳ ಸನಿಹ ಸಂಕರ್ಷಣ
ಭ್ರಾಮಕ ಲೋಕದ ಸುಂದರ ಪ್ರೇಕ್ಷಣ
ಕಲಿಯುಗದಿಂ ಆ ತ್ರೈತಾಯುಗಕೆ
ಇಳಿಯೆನೆ ಮರೆಸುತ ಪವಿತ್ರನೆಲೆಗೆ ೧೨

ಆ ಪುರಾಣಕಾಲದ ಪವಿತ್ರಗಿರಿಗೆ
ರಮಣೀಯ ನಿಸರ್ಗದ ಪ್ರಶಾಂತನೆಲೆಗೆ
ಸೆಳೆದೊಯ್ದಿದೆ ಕಂಗಳ ಋಷ್ಯಮೂಕ
ಪಾದವ ತೊಳೆಯುತಿಹ ಪಂಪಾತಟಾಕ ೧೩

ಸುಗ್ರೀವನು ನೆಲೆಸಿದ ಓ ಋಷ್ಯಮೂಕ !
ಸೀತಾನ್ವೀಕ್ಷೆಯ ಪ್ರಪ್ರಥಮಾಂಕ
ರಾಮ ಸುಗ್ರೀವರ ಸ್ನೇಹದ ಬಂಧ
ಅಗ್ನಿ ಸಾಕ್ಷಿಯಲಿ ಹನುಮನೆ ನಿಂದ ೧೪

ದರ್ಭಾಸನದಿಂ ಮುನಿಗಣ ವಿಪ್ರರ
ಅರಣಿ ಘರ್ಷಣೆ ಕೇಳಲ್ಲಿ sss
ವೇದ ಘೋಷದಿಂ ಹೋಮಾಗ್ನಿಯಿಂ
ದೇಳುವ ಧೂಮವ ನೋಡಲ್ಲಿ sss.... ೧೫

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಾಮಚಂದ್ರನ ಪಾದಸ್ಪರ್ಶದೆ
ಪುನೀತವಾಗಿದೆ ಇಳೆ ಇಲ್ಲೀ sss....
ತುಂಗಭದ್ರೆಯ ಮುಕುಟದ ಗಿರಿಯನು
ದರ್ಶಿಸಿ ಮೋಕ್ಷವ ಪಡೆಯಲು ಬಾ ಇಲ್ಲೀ....sss.... ।೬।

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಲೆಯು ಬಸವಯ್ಯ

ಕೋಲೆಯ ಬಸವಯ್ಯ
ಬಾರಯ್ಯ ನಮ್ಮ ಮನೆಗೆ ।೫।

ಆಗೋ ಕೇಳಲ್ಲಿ ನಾಗಸ್ವರದ ನಾದ
ಚಿಣ್ಣರ ಮನಗೆದ್ದ ರಂಗಿನ ಬಸವ ಬಂದ
ಬಸವ ನಿಂತರೆ ತಾವು ನಿಲುವರು ಆತ ಹೊರಟರೆ
ಹಿಂದೆ ಹೊರಟರು ನೋಡಿ ತಣಿಯದ ಎಳೆಯರು ।೧।

ಕತ್ತಿನಿಂ ಮೊಳಗುತಿದೆ ಕಂಚಿನ ಘಂಟನಾದ
ಕವಡೆ ಸರ ಜೊತೆ ಹೆಣೆದ ಕರಿಮಣಿಯ ಸರವು
ಮಂಡಿಗೊರಸಿಗೆ ಗೆಜ್ಜೆ ಏಳ ಬಣ್ಣದ ಕುಚ್ಚು
ಕೊಂಬೆರಡು ಹೊಂದಿವೆಯೊ ತಾಮ್ರದ ಮೊನಚು ।೨।

ಯಾವಾಂಗನೆಗು ನಿಲುಕದಾ ಐಸಿರಿ
ಯು ನಿನದಾಗೆ ಅವ ಪಂಡಿತನ ಜರಿ
ಶಾಲು ಅಭ್ರಕದಿ ಮಿನುಗು ತಾ
ಜನರ ಸೇವೆಯೆ ಈಶನದೆನ್ನುತಾ ।೩।

ಬಡವ ಬಲ್ಲಿದನೆಂಬ ಭೇದವಿಲ್ಲ
ಕೊಟ್ಟವನು ಕೊಡದವನು ಎಂಬುದಿಲ್ಲ
ಸ್ಥಿತ ಪ್ರಜ್ಞನಾಗಿ ನೀ ನಿಂತೆ ಜಗಕೆಲ್ಲಾ
ಗುರುವೆನಿಸಿಯೂ ಇನಿತು ಬಿಂಕವಿಲ್ಲ ।೪।

Sri Vidyabharathi Book Centre, Sringeri

CC-O. In Public Domain. Digitized by eGangotri

ಶುಭ ವೇಳೆ ಬರುತೈತೆ ಅಹುದಹುದೆನ್ನುತಾ
ಶುಭ ಘಂಟ ನಾದದಲಿ ಸಂದೇಶ ಸಾರುತಾ
ವಿಶ್ವಪೂಜ್ಯನು ಆದನೀ ಊರೂರು
ಕೇರಿ ಕೇರಿ ಮನೆಮನೆಗೂ ಬಾರಯ್ಯ..... ೫೫

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಗೆಯು ಎದ್ದಿದೆ

ಹೊಗೆಯು ಎದ್ದಿದೆ
ಮನೆಯಲ್ಲೊಗೆಯು ಎದ್ದಿದೆ ॥ಪ॥

ತಾಯಿ ತಂದೆ ಯಾರೊ ತಿಳಿಯಲಿಲ್ಲ
ಗುರುಹಿರಿಯರ ಗುರುತು ಹತ್ತಲಿಲ್ಲ
ದೇವರೆಂಬುದೆಲ್ಲೂ ಇಲ್ಲ
ಅಹಂಭಾವ ಮರೆಸಿತೆಲ್ಲ ॥೧॥

ಜಾತವೇದ ಸಮಾಜ ಜ್ಞಾನ
ಮತ ವರ್ಣ ಭೇದದ ಮಾಫಸ್ಸಾನ
ಕಣ್ಣು ಕಾಣದೆ ಹೊಗೆಯನ್ನಟ್ಟುತ
ದಳ್ಳುರಿಯಲಿ ಹೊಡೆದಾಡುತಾ ॥೨॥

ಅಜ್ಞಾನವೆಂಬ ಕಸವು ತುಂಬಿ
ಜ್ಞಾನವೆಂಬ ಸೊಡರು ನಂದಿ
ಮಿಣುಕು ಹುಳುವಿನಂತೆ ಕಂಡೆ
ಮಿನುಗುತಿಹುದು ಒಂದು ಕೆಂಡ ॥೩॥

ಕಸವನೆಲ್ಲ ಮೆಲ್ಲನೊರೆಸು
ಜ್ಞಾನ ಸೊಡರ ಫಳಾಗಿರಿಸು
ಕಣ್ಣ ತೆರೆದು ಈಗ ನೋಡು
ಪ್ರೀತಿ ಕಂಗಳ ಅರಿತು ಬಾಳು ॥೪॥

ಹೊಗೆಯು ಎಲ್ಲಿದೆ
ಎಲ್ಲೆಲ್ಲೂ ಬೆಳಕು ಚೆಲ್ಲಿದೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾದಯ್ಯನ ಕರಗ

ಸಿರಿಯೂರ ಬನದಾಗೆ ದೇವಿಯ ಜಾತ್ರೆ
ನಮ್ಮೂರ ಪಂಡಿವಾಳ ಮಾದಯ್ನ ಕರಗ
ಎಂದ್ರೇನೆ ಸಾಕು ಬರ್ತಾರೆ ಹೊಳೆಯಂತೆ
ಬಂಡಿ ಬಂಡಿಗಳಲಿ ಕರಗ ! ಕರಗ ! ಕರಗ ! ೧೧

ಬಣ್ಣ ಬಣ್ಣಗಳ ಬಣ್ಣಗಳ ಮಿಂಚು
ಹೊಳಿತೈತೆ ಹೊಂಬಣ್ಣದ ಕಂಬಿಯಂಚು
ಹಳದಿ ಊದಾ ಕಪ್ಪು ಕೆಂಪು ನೀಲಿಯ ಸೀರೆ
ಕುಂಕುಮ ಗಿಳಿಹಸಿರು ರೇಶಿಮೆ ಧಾರೆ ೨೧

ಕೆಂಧೂಳ ಮಣ್ಣಲಿ ಬಂಡಿಗಳೋಟ
ಮಾತೇ ಕೇಳಿಸದು ಕಿವುಡರ ಆಟ
ಹಬ್ಬದ ಸುಭ್ರಮವೆಲ್ಲೆಲ್ಲೂ ಅಂದ
ಫಳ ಫಳ ಹೊಳೆವ ಬನವೇವತೆ ಚಂದ ೩೧

ಹಸುರ ಸೀರೆಗೆ ಒಪ್ಪುವ ಕುಪ್ಪಸ
ಮೇರೆಯೆ ಇಲ್ಲದಾವುದೋ ಸಂತಸ
ತುರುಬಲಿ ಮಿಂಚುವ ತಾಳೆಪೂ ಅಂದ
ಚಿಲುಮೆಯ ಕಾಲ್ಗೆಜ್ಜೆ ಕಿಣಿ ಕಿಣಿ ನಾದ ೪೧

ಗಮ ಗಮ ಮಲ್ಲಿಗೆ ಹೂವಿನ ಬುಟ್ಟಿ
ಬಾಳೆ ವೀಳೆ ಜವನ ಧೂಪವೆ ಪತಿ
ತಲೆ ಮೇಲೆ ಮಿರುಗೈತೆ ತಂಪಿನ ಚೊಂಬು
ಬಿಳಿಪಟ್ಟೆ ಬಳಿದೈತೆ ಮಲ್ಲಿಯನೋಂಪು ೫೧

Sri Vidyabharathi Book Centre, Sringeri

CC-O. In Public Domain. Digitized by eGangotri

ಫಾಲ್ಗುಣ ಲಗುನದ ಚಂದುಳ್ಳಿ ಗಂಡು
ಮಾದಯ್ಯನೆಂಬೋನು ಎದೆಗಾರ ಗಂಡು
ಕುಡುಗೋಲಿನಲ್ಲೇ ಹುಲಿಯ ಹೊಡೆದೋನು
ಮಲ್ಲಿಯ ತಪಸಿಗೆ ಶಿವ ಕೊಟ್ಟ ವರನು ೧೬।

ಜಾತ್ರೆಗೆ ಮುನ್ನವೆ ಮದುವೆಯು ನಡೆದೋಯ್ತು
ದೇವಿಯ ಹರಕೆಯು ಹಂಗೆ ಉಳಿದೋಯ್ತು
ಹಿರಿಯೋರು ಎಲ್ಲಾ ಸೇರ್ಕಂಡ್ರು ಒಂದಿನ
ಹರಕೆಯ ಕರಗಕೆ ಒಪ್ಪಿಸಿದ್ರು ಮಾದಯ್ನ ೧೭।

ಅರಿಶಿನ ಬಳಕೊಂಡು "ಶಿವ ಶಿವ" ಎಂದ್ಲು
ನೀನೊಳ್ಳೆಯ ಗಂಡ್ಸಿಕ್ಕೆ ಹರಕೆಯ ತೀರ್ಸೆಂದ್ಲು
ಮಾದಯ್ಯನೊಪ್ಪಿದ್ಲು ಕರಗವ ಮಾಡೆಂದು
ಮಾರಮ್ಮನ ಹರಕೆ ಮದುವೆಗೂ ಮುಂಚೆಂದು ೧೮।

ಬಿಸಿ ಗಾಳಿ ಚಿಮ್ಮುವ ಬೆಂಕಿಯ ಹೊಂಡ
ಅನಲನೆಬ್ಬಿಸೋ ಮಂತ್ರದ ಕುಂಡ
ಜನಗೋಳು ತುಂಬವ್ರೆ ಎಳ್ಕಬೀಳ್ದಂಗೆ
ನೂಕು ನುಗ್ಗಾದ್ರೂ ಹೆಂಗಸ್ರೂ ಅವ್ರೆ ೧೯।

ತಲೆ ಮೇಲೆ ಮಡಕೆ ಏಳಲೂ ಬೆಂಕಿ
ಹೊತ್ತಿ ಉರೀತಾವೆ ಬೂದಿಯನುರುಬಿ
ಮದುವೆ ಗಂಡಿನ ಕರಗ ಮಾದಯ್ಯಗೆ ಪುಣ್ಯ
ಪರಮಾಶಿ ಗಂಡು ! ನೋಡಿದ್ನಾವೆ ಧನ್ಯ ! ೧೦೦।

ಜಯಕಾರ ಮೊಳಗಿತು ಹೊಡೆಯಿತು ಜಯಭೇರಿ ! !
ಅರಚವ್ನೆ ಪೂಜಾರಿ "ದೇವರು ಬಂದೈತೆ ಬಿಡುದಾರಿ ದಾರಿ ! "
ನಡುಗುತಾ ಕುಣಿಯುತಾ ಗಿರಿ ಗಿರಿ ತಿರುಗುತಾ
ದೇವಿಯ ಜಪವಾನೆ ಮಾದಯ್ಯ ಜಪಿಸುತಾ ೧೦೧।

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಂಡವ ಹಾಯುತಾ ಮಧ್ಯಕೆ ಬಂದಪ್ಪೆ
ಉರಿನಾಲಿಗೆ ಚಾಚಿದೆ ನೋಡಲ್ಲಿ ಕೆಂಪಾನೆ
ಬಸವಳಿದ ಮಾದ ತೊಪ್ಪನೆ ಕುಸಿದಪ್ಪೆ ! 'ಶಿವನೆ !
ಹೋ' ಎಂತು ಮುಂದಿ 'ಮದುವೆಯ ಗಂಡು ಇನ್ನೆಲ್ಲಪ್ಪೆ' ೧೨೨।

ಜಗಜಾತ್ರೆಯಾಗಿ ಜನ ಜಂಗುಳಿ ಸೇರಿತು
ಮಾರಿಗೆ ಬಲಿಯಾದ ಮುಗ್ಧ ಮಾದಯ್ಯನೆತ್ತಿತು
ನೊಂದಿತು 'ಈ ತೆರನ ಕರಗವ ತಾವೆಂದೂ ಕಂಡುದಿಲ್ಲ
ಅಯ್ಯೋ ! ಮಲ್ಲೀಗೆ ಇನ್ನು ಗಂಡನೆ ಇಲ್ಲ ! ! " ೧೨೩।

ವಿಧವೆಯ ಸೀರೆಯ ಉಡಸಪ್ಪೆ ಮಲ್ಲೀಗೆ
ಕುಂಕುಮ ಹೋಯ್ತು ಬಳೆಯೂ ಹೋಯ್ತು
ದೇವರ ದರ್ಶನಕೆ ಮುಂದಿ ಬಂದು
ಮರಣ ದರ್ಶನವಾಯ್ತೆಂದಿತು ನೊಂದು ೧೨೪।

ಕುಂಕುಮ ಅಳಿಸಪ್ಪೆ ಬಿಳಿಸೀರೆ ಉಡಿಸಪ್ಪೆ
ಬಳೆಯ ಒಡೆಸಪ್ಪೆ ಎಳೆಯ ಪೊಗದಾಗಳವೆ ಇಲ್ಲ !
ಕರಗವ ನೋಡಿದ್ಮಂದಿಯೇ ದೇವರ ಮರಣವ
ನೋಡಿದ್ಯಾಗೂ ಮೂಢನಂಬಿಕೆ ಮಾತ್ರವ ಬಿಪ್ಪೇ ಇಲ್ಲ ! ೧೨೫।

Sri Vidyabharathi Book Centre, Sringeri

CC-O. In Public Domain. Digitized by eGangotri

ನಶ್ವರತೆ

ಜಗದೊಳು ಕಾಣುವುದೆಲ್ಲವೂ ಬಣ್ಣ
ಸತ್ಯವನರಿಯಲು ಯತ್ನಿಸೊ ಅಣ್ಣ ॥ಪ॥

ಮಂಜಿನ ಹನಿಗಳು ಕುಂತಿಹ ಬೆಡಗು
ಗರಿಕೆಯ ಮೊನೆಯಲಿ ಮಿರುಗುವ ಬಣ್ಣ
ನಿತ್ಯವು ಅಲ್ಲವೊ ಆದು ಮೋಸದ ಬೆಡಗು
ನೇಸರು ಏರುತಾ ಮಾಯವೊ ಅಣ್ಣ ।೧।

ಹಸುರಿನ ಎಲೆಗಳು ಮುಗಿಯುವ ಬೆಡಗು
ಕಾನನವೆಲ್ಲವೂ ಚಪ್ಪರ ಮಿನುಗು
ಬೇಸಗೆ ಬಂದರೆ ಬಾರೆಲೊ ಅಣ್ಣ
ನೋಡುವೆ ನೀ ಒಣಟೊಂಗೆಯ ಬಣ್ಣ ॥೨॥

ಗಮ ಗಮ ಪರಿಮಳ ಸೂಸುವ ತೋಟ
ಮಧು ಮಾಸವ ಸಾರುವ ಪ್ರಕೃತಿಯ ಮಾಟ
ಬೇಸಗೆಯಲಿ ಕುಡಿ ಒಣ ಧೂಳಿನ ಘಾಟ
ಎಂತಹ ಮೋಸವೊ ಕಾಲನ ಆಟ ! ॥೩॥

ಹಾರುವ ಬಣ್ಣವ ಚಿಟ್ಟೆಗೆ ಸಡಗರ
ಮೂರು ದಿನಗಳ ಮೆರೆಯುವ ಕಾತರ
ಚಣ ಚಣಕೂ ಕಣ ಕಣಕಿರ ಬೇಕಿದೆ ಎಚ್ಚರ
ತಪ್ಪಿದರಾಯಿತು ಹಕ್ಕಿಗೆ ಓಗರ ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಳೆಗಾಲದಿ ಉಕ್ಕೇರುವ ನದಿಯನು ನೋಡು
ಜುಳು ಜುಳು ನಾದವ ಇಂಪಿನ ಹಾಡು
ಬೇಸಗೆಯಲಿ ಬಾ ಮರೆಯದೆ ನೋಡು
ನೀರವ ಮಸಣದ ಬಂಡೆಯ ಕಾಡು ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾತ್ಮ

ಶಾಂತಿಯ ಧೂತ ವರಸಂಜಾತ
ಗಾಂಧಿ ಮಹಾತ್ಮ ಸ್ವಾತಂತ್ರ್ಯಧಾತ ॥ಪ॥

ದಾಸ್ಯದ ಶ್ಯಂಖಿಲೆ ಕಳಚಲು ಎಂದೇ
ಭಾರತ ಹರ್ಷದಿ ಜನುಮಿಸಿ ಬಂದೆ
ಶಾಂತಿ ಅಹಿಂಸೆಯ ಬ್ರಹ್ಮಾಸ್ತ್ರದಲೇ
ಕಳಚಿವೆ ಅಸಹ್ಯದಾಸ್ಯದ ಸಂಕೋಲೆ ॥೧॥

ರಕುತದ ಕೋಡಿಗೆ ಮರುಗದ ಮನ
ಕರಗದ ಕದಡದ ಪೈಶಾಚಿಕ ಮನ
ಕಾಯಿತು ನಿನ್ನಯ ಮುತ್ಸವೆ ಕೂರ್ದಸಿ
ಆ ಬಿಳಿಯರಿಗೆ ಓ ರಣ ಸನ್ಯಾಸಿ ॥೨॥

ಹಿಂದು ಮುಸಲ್ಮಾನ ಸಿಕ್ಕರು ಒಂದೇ
ಎಲ್ಲರ ಧರ್ಮದ ಸಾರವು ಒಂದೇ
ವಿಧ ವಿಧ ಮಾರ್ಗದಿ ಹುಡುಕುವುದೊಂದೇ
ಸೇರುವ ದೇವನು ಒಬ್ಬನೆ ಎಂದೆ ॥೩॥

ಹರಿಜನ ಗಿರಿಜನರನುಜರು ಎಂದೆ
ಧಮನಿಯಲ್ಬರಿದಿಪ ರಕುತವು ಒಂದೆ
ಗಾಳಿಯು ನೀರೂ ಕುಡಿವುದು ಒಂದೇ
ಸುಡುವಗ್ನಿಯು ಒಂದೆ ಹರಿಪ್ರಿಯರೆಂದೆ ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾನ್ದಳ ತುಂಬಿತು ವಿಶ್ವವೇ ಕೂಗಿತು
ಇಡೀ ಭಾರತ ಸ್ವತಂತ್ರ ಸಂಸ್ಥಾನ ! ! !
ನಿನ್ನಯ ತೂರ್ಯವು ಗಗನದಿ ಮೊಳಗಿದೆ
ಎಂದೂ ಭಾರತ ಒಂದೇ ಎಂದೆಂದೂ ಭಾರತ ಒಂದೇ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾರದೆ

ಪಟಕದಂತೆ ಎನಿತು ಶುದ್ಧ
ನಿನ್ನ ಹೃದಯ ಶಾರದೆ
ಚೆಂಗುಲಾಬಿಯೆಳೆಯ ನಗುವು
ನಿನ್ನ ನೆನಪ ತಂದಿದೆ ॥೧॥

ದುಃಖ ಕಡಲಿಗೆನ್ನ ತಳ್ಳಿ
ಓ ಎನ್ನ ಶಾರದೆ
ಒಂಟಿ ಮಾಡಿ ತೊರೆದು ಹೋದೆ
ಮರಳಿ ನೀನು ಬಾರದೆ ! ॥೨॥

ನಿನ್ನ ಕೈಯ ನೀರನುಂಡು
ಬೆಳೆದ ಗಿಡಗಳೆನಿತು ಹಸಿರು
ಎಲೆಯೆ ಒಣಗಿ ಉದುರಿದರೂ
ನಿನ್ನ ನೆನಪು ನಿತ್ಯ ಹಸಿರು ॥೩॥

ಬಾಳಿಮೇಳೆ ಗಿಡಗಳೆಲ್ಲಾ
ಶೋಕ ತೋರಿ ಮಿಸುಕದೆ
ಸ್ತಬ್ಧ ದೃಶ್ಯದಂತೆ ಮೊಗವ
ಕೆಳಗೆ ಹಾಕಿ ನಿಂತಿವೆ !೪!

ಮುರುಕು ಗುಡಿಸಲ ಕೆಳಗೆ
ಒಂದೇ ಗಂಗಳದೂಟ
ಗಂಜಿ ಕುಡಿವ ಸಂತಸವೂ
ಸಹಿಸದಾಯಿತೆ ವಿಧಿಗೇ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಲಿ ಸೀರೆ ಬೇಕೆಂದೆ
ಹಾ ! ಒಮ್ಮೆ ನೀನು ಶಾರದೆ
ಹಣವಿಲ್ಲವೆಂದರೂ ನೀ
ಹಾ ! ಮುನಿಯಲಿಲ್ಲ ನೆನಪಿದೆ ॥೬॥

ಕಾಸು ಕಾಸು ಗಂಟು ಹಾಕಿ
ಬೆವರು ಸುರಿಸಿ ದುಡಿದೆ ದುಡಿದೆ
ಸೀರೆ ತಂದೆ ಆದರೇನು ನೀ
ಬಾನನೀಲಿಯಲ್ಲೇ ಕರಗಿದೆ ॥೭॥

ಆರ ಕಣ್ಣೂ ಕಾಣದಂತೆ
ನೀ ಬಾನ ನೀಲಿ ಸೇರಿದೆ
ಸುಳಿವರಿತ ಬಾಳೆಯೀಳೆ ತೋಳ
ಬೀಸಿ ಕರೆದಿವೆ "ಶಾರದೆ" ! ! ಶಾರದೆ ! ॥೮॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಜಾವು

ಕನಸ ಲೋಕದಿಂ ಮಧುರ ಲೋಕಕೆ
ಎಳೆದು ತಂದಿಹೆ ಕೋಗಿಲೆ
ವೃಂದಗಾನದೆ ಮುದವ ನೀಡಿದೆ
ಹಕ್ಕಿಯುಲಿಗಳ ಹಿಮ್ಮೇಳದೆ ೧೧

ಹಸಿರು ಪೈರುಗಳೆಲ್ಲ ನಮಿಸುತಾ
ಬೀಸಿ ಕರೆದಿಹ ಸ್ವಾಗತ
ಮಾವು ಹೊಂಗೆಯು ನಾದಗೈಯುತ
ಸುಯ್ಯ ಸುಯ್ಯನೆ ಬೀಸುತಾ ೧೨

ಜಾಜಿ ಮಲ್ಲಿಗೆ ಕಂಪನೊಸರುತಾ
ತಂಪ ತೀಡುವ ಮಾರುತ
ಶುಭದ ಕಾಮನೆ ಕೋರುತಾ
ಸುಪ್ರಭಾತವ ಸಾರುತಾ ೧೩

ಅರುಣ ರಾಗವ ಚೆಲ್ಲಿ ನೇಸರ
ಕನಕಾಭಿಷೇಕವ ಗೈದಿದೆ
ನಿಸರ್ಗ ದೇವಿಗೆ ಪ್ರೇಮ ವರ್ಷಿಸಿ
ಯಕ್ಷ ಲೋಕವ ರಚಿಸಿದೆ ೧೪

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾರಂಗಿ

ನೀಲ ಬಾನಿನ ಹೊಳೆವ ಚೆಲುವ
ಹರಿವ ನೀರಿನ ತಿಳಿಯಲಿ
ಬಿಂಬ ಮೂಡಿಸಿ ವೃಕ್ಷರಾಜಿಯ
ಆಲೆಯು ನಾದದಿ ತೂಗಿಸಿ ।೧।

ಎಲ್ಲೂ ಕಾಣದ ಆವ ಬೆಡಗನು
ಹೊನ್ನ ಕಿರಣದೆ ಮೂಡಿಸಿ
ಹಕ್ಕಿ ಇಂಚರದಿಂದ ನಾಡಲೆ
ನವ ಯಕ್ಷ ಲೋಕವ ವಿರಚಿಸಿ ।೨।

ತಂಪನೆರಚುತ ಮಾರುತ
ಸೊಯ್ಯ ಸೊಯ್ಯನೆ ಬೀಸುತ
ಕವಿಯ ಮನವನೆ ತೊಯ್ಸಿದೆ
ಕಾವ್ಯ ಸುಧೆಯನು ಹರಿಸಿದೆ ।೩।

ನೊರೆಯುಬ್ಬಿಸುತಿಹ ಓ ಜಲದೇವತೆ
ಹಾರಂಗಿಯೆ ನೀ ಕಾವ್ಯ ವಿಧಾತೆ
ಜಲದುದ್ಭವ ಹಾಲ್ಬಿಳುಪಿನ
ಜಲಪಾತದಿಂ ತಾಯ್ನಾಡೆ ಪುನೀತೆ ।೪।

ಆವ ಕಾಲದ ಮುನಿಯ ಬೀಡಿದೊ
ಆವ ಮಹಿಮೆಯ ತಪೋನೆಲವಿದೋ
ಮಧುರ ನೆನಪಾವುದೊ ಮರು ಕಳಿಸಿದೆ
ಮನಕೆ ಶಾಂತಿಯ ನೀಡಿದೆ ।೫।

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಪ್ರಭಾತ

ಕುಂಚದಿ ಮೂಡಿದ ಚಿತ್ರದೊಲು
ಪೂರ್ವ ದಿಗಂತದಿ ಚೆಮ್ಮುಗಿಲು
ಅಚಲಿಪವಾಗಿಯೆ ಬೆಡಗಿನಲಿ
ಮೆರೆದಿವೆ ಕುಂಕುಮ ರಾಗದಲಿ ।೧।

ಕಾಂಚನ ಕುಸುಮ ವರ್ಷದ ಕಂಪು
ತೀಡಿದ ಕಮ್ಮಲರೆರಚಿದ ತಂಪು
ಎಲೆ ಎಲೆಗರಿಕೆಯ ಮುಕುಟವು ಹಿಮಮಣಿ
ಬಳಕುವ ಹಂಬೂ ಮುತ್ತಿನ ಸರಣಿ ।೨।

ಪವಿತ್ರ ದಿನಕರನುದಯದಿ ಹರ್ಷಿತ
ವಿಕಸಿತ ಕಾಂಚನ ಕಮಲಾಚ್ಛಾದಿತ
ಸರಸಿನ ಜಲಮುನಿಸಲಿ ಅಚಲಿತ !
ಬಂಧಿತ ಜಲಚರ ಜೀವನ ಸ್ಥಗಿತ ! ।೩।

ಭೃಂಗದ ಜೇಂಕಾರಕೆ ತಾ ಸ್ಪಂದಿಸಿ
ದಿಗ್ಬಂಧಿತ ಜಲಚರ ರವಿದರ್ಶನ ಕೆಳಸಿ
ಕಮಲದ ದಂಟಿನ ಜಾಡನು ಜಗ್ಗಿಸಿ
ಚಂಚಲ ಭ್ರಮಣದಿ ಯತ್ನಿಸಿವೆ ।೪।

ಹಿಮಮಣಿ ಮಿರುಗಿನ ನಾನಾ ಬಣ್ಣ
ಇಮ್ಮಡಿ ಸೊಗಯಿಸಿ ಹಸುರಿನ ತೋರಣ
ಎಲ್ಲೆಡೆ ಸಾರಿವೆ ರವಿಯಾಗಮನ
ಶುಭ ಸಪ್ತಾಶ್ವದಿ ಮೆರೆದಿಹನ ।೫।

Sri Vidyabharathi Book Centre, Sringeri

CC-O. In Public Domain. Digitized by eGangotri

ಹಸುರಿನ ಮಡಿಯಲಿ ಮುಡಿಹೂವಲ್ಲಿ
ಮೌನಕೆಯೇ ದಿಟ ಬನದೈಸಿರಿಯು
ಘಲ್ ಘಲ್ ನೂಪುರ ನಾದವನಾಲಿಸು
ಪಕ್ಷಿಗಳಿಂಚರ ಆ ಪರಿ ಸೊಗಸು ! ೧೬।

ಇಂದ್ರಧನುವಿನಭಿಮಂತ್ರಿತ ಬೆಳಗೋ
ಇಂದ್ರಪದಾರ್ಥಿಯ ತಪಕೆರಚಿದಮಂಕೋ
ದಿನನಿತ್ಯವು ಕಾಣುವ ಬೆಳಗಲ್ಲವಿದು
ಈ ನಿಸರ್ಗವ ಸ್ವರ್ಗವ ಮಾಡಿಹುದು ೧೭।

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಫಟಿಕ ಶುದ್ಧೆ

ಕಣ್ಕೋರೈಸುವ ದೀಪ್ತಿಯ ಸುರ ಸುಂದರ ಸೃಷ್ಟಿಯ ಮೋಹಕ
ಬೆಡಗಿನ ಶೀತಲ ಸುಂದರಿ ಯಾರಿವಳು
ದೇದೀಪ್ಯಮಾನ ಪ್ರಭೆಯನು ಸೂಸುತ ಪಿಡಿನಡೆಯಿಡುತಾ ನನ್ನೆಡೆ
ಬರುತಿಹ ಮಾಯಾಂಗನೆ ಯಾರಿವಳು
ಆವುದೋ ಗೀತದ ಮಾರ್ಮಿಕ ಸಂಗೀತಕೆ ಮೆಲ್ಲಡಿಯಿಡುತಾ
ನೂಪುರ ನರ್ತನಗೈಯುವ ಅಮೋಘ ಸುಂದರಿ ಯಾರಿವಳು
ಅಧರಧ್ವನಿಯೂ ಅಚಲಿತವಾಗಿಯೇ ಮಾರ್ಮಿಕ ಕಥೆಯನು
ಎನ್ನೊಳುಸುರಿದ ಮೂಕಾಂಗನೆ ಯಾರಿವಳು

ಓ ದಿವ್ಯಕನ್ಯೆ ! ಅಂಜದಿರು ನೀನು ನಾನಿನ್ನ ಬಳಿಸಾರೆನು
ಅಕಳಂಕ ಪ್ರೇಮವನೆ ಕಂಗಳಲೇ ಸಾರುತಿಹೆ ನೀರೆ
ರವಿವರ್ಮನ ಕುಂಚಕೂ ನಿಲುಕದಾಯ್ತು ಈ ನಿನ್ನ ರೂಪದಾ
ಹೊನಲು
ಅಪೂರ್ವ ಸುಂದರಿಯೇ ನೀ ಓಟ ಪೇಳಾರೆನಲವಳು ಸುರಿದಳು
ಮುಗುಳು ನಗುತಾ

" ರಂಭೆಯೂ ನಾನಲ್ಲ ವೇನಕೆಯೂ ನಾನಲ್ಲ ಊರ್ವಶಿಯೂ ಅಲ್ಲ
ಯಮುನಾ ತೀರದಿ ಚೆಲ್ಲಾಟವಾಡಿದ ಗೋಪಿಕೆಯರಲಿ ನಾನಿಲ್ಲ
ಸುರಸುಂದರ ಸೃಷ್ಟಿಯ ವಿಶ್ವ ಅಗೋಚರ
ಹೊನಲನೇ ಹರಿಸುವ ಕಾವ್ಯಕನ್ನಿಕೆ
ನಾ ಸ್ಫಟಿಕ ಶುದ್ಧೆ ! "

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡಲತೀರದಲ್ಲಿ ವರ್ಷರಾತ್ರಿ

ನೀಲಾಂಬರದಲಿ ತೇಲುತ ಓಡಿಹೆ ನೀ ರೂಪಸಿ ಚಂದ್ರಮೆ
ಪ್ರಿಯತಮೆಯು
ನಾಚುತ ಓಡುತ ನೀನೇಕೀಪರಿ ಮೇಘದ ಮರೆಯಲಿ
ಇಣುಕುತಿಹೆ ॥೧॥

ಧೀರಸಮೀರನು ಸಂದೇಶ ಸಾರುತ ನಿನ್ನಿಂದೀಕಡೆ
ಬರುತಿಹನು
ಪ್ರಿಯತಮ ನಾರವನೆಲ್ಲಿಹನೋ ಕಾಣೆನು ನಾ ಏನಿಹುದೊ
ಸಂದೇಶವದು ॥೨॥

ಕಡಲಲೆ ಹೊಮ್ಮುತ ಚಿಮ್ಮುತ ನೊರೆತೊರೆಯುಬ್ಬಿಸಿತಾ ಆಲೆ
ಮೇಲೇಳುತ ನಿನ್ನನು ಸೇರೆ
ನಿಷ್ಫಲ ಜತನದೆ ಕೋಪದಿ ಕಿಡಿಕಾರುವ ಗಂಡನಪೊಲು
ಮೇಘವು ಘರ್ಜಿಸಿ ಥಳ ಥಳ ಮಿಂಚನು ಬೀರೆ ॥೩॥

ಇನಿಯನ ಮುನಿಸಿನ ಗಡಸಿನ ನುಡಿಗೆ ಗಳಗಳನಳುವಾಂಗನೆಯೊಲು
ವರ್ಷವು ಸುರಿಯಿತು ಮೋಡವು ಕರಗಿತು
ನಿಶ್ಚಲ ಮುಖದಿಂ ಪ್ರಿಯತಮೆ ನಸುನಗಲು ಪ್ರಕೋಪ ಜಲಧಿ
ಪ್ರಶಾಂತವಾಯಿತು ಜುಳು ಜುಳು ನಾದದಿ
ಇನಿಯನ ದರ್ಶನ ಹರ್ಷಿಸಿತು ॥೪॥

ಆವಳೀ ಸೋತಳು ಬಳಿಗೇ ಸಾರ್ದಳು ನಭದಿಂ ಭೂಮಿಗೆ
ತಾ ನಿಳಿಯುತಾ ಚೆಂದಳು
ಕಡಲಿನ ಅಂಚಿನ ನೀಲಿಯ ಮುತ್ತಿಡುತಾ ಪುಟ ಪುಟ ನೆಗೆಯುತಾ
ಸಮುದ್ರ ರಾಜನ ರಮಿಸಿದಳು ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಪಾ ತಟಾಕಂ

ತೇಲುತಾ ಸಾಗುತಿಹ ಚಕ್ರವಾಕಂಗಳ ಕಲರವದಿಂ
ಬಿಳಿಯಂಚೆಗಳ ಸಂವೇಗದ ಚಂಚಲ ಭ್ರಮಣದಿಂ
ಎಳೆ ಬಿಸಿಲ್ಗೆ ಮಿರುಗುತಿಹ ಬೆಳ್ವಕ್ಕಿಗಳ ಜಲಮಜ್ಜನದಿಂ
ಎಸೆವ ನೀರ್ಪನಿಗಳ ವರ್ಣಮಯ ಬಿಂದುಗಳ ಸುರಮ್ಯ ನೋಟದಿಂ
ವಾನರರ ಆನಂದೋತ್ಕರ್ಷದ ತೂಗುಯ್ಯಾಲೆ ಜಿಗಿತಂಗಳಿಂ,
ಕೃಷ್ಣಾವ್ಯಗ ಹರಿಣಿಗಳ ನಿರೀಕ್ಷಣೆಯ ವೀಕ್ಷಣೆಯಿಂ
ಕೌತುಕಂ ನೋಳ್ಪವೊಲಚಲಮಾಗಿರ್ಪ ಬಕಂಗಳಸ್ತಬ್ದ ದೃಶ್ಯದಿಂ
ತಟಾಕದ ತೀರದೊಳ್ ಸ್ವಾಗತಕೋರ್ವವೋಲ್ ಕಮಲದಂಟನು
ಸೀಳ್ದು ಮೆಲ್ವ ಸಂತುಷ್ಟಿಯಿಂ ಸೊಂಡಿಲನೆತ್ತಿ ಬೃಂಹಿತಗೆಯ್ವ
ಇಭ ಸಂಕುಲದಿಂ, ಪುಷ್ಪವರ್ಷಗರೆಯುತಿಹ ತರುಲತೆಗಳಿಂ
ಮಲ್ಲಿಗೆ ಜಾಜಿ ಚಂಪಕ ಪಾರಿಜಾತಮೇ ಮೊದಲಾದ
ವಿಧವಿಧ ಪುಷ್ಪ ಪರಿಮಳಗಳಿಂ, ಚಂದನ ಸುವಾಸಿತೆ
ಮಾರುತನೊಡನೆ ಧರೆಗೈತುದು ಸಂದೇಶಮಂ ಸಾರುವ
ವರ್ಷ ಋತುವಿನ ಕಾಲ ಮೇಘಮಾಲೆಯೊಲು ವಿಕಸಿತ
ಕಮಲಂಗಳ ಕಂಪಿನ ಸಂಕರ್ಷಣದೆ ಕಾಲಭೃಂಗ
ವೃಂದಗಳಾಲಗವನದಿಂದುದ್ಭವಿತ ಜೇಂಕಾರ ತೂರ್ಯದಲಿ,
ಬಿದಿರ್ಮೆಳೆಗಳನಡುವಿನಿಂ ಕೇಳ್ವಹರ್ಷೋದ್ಗಾರದೊಲು
ಶುಕಪಿಕ ಪಕ್ಷಿ ಸಂಕುಲಂಗಳಿಂಚರಂಗಳಿಂ. ಅರ್ಘ್ಯಪಾದ್ಯಾದಿ
ಗಳಿಂ ನಡೆವ ಸತ್ಕಾರದೊಲು ಕನ್ನೈದಿಲೆ ಬಿಳಿನೈದಿಲೆ
ಕಮಲಂಗಳಿಂ ಸಮೃದ್ಧಮಾದ ಪಂಪಾತಟಾಕದ ಸ್ಫಟಿಕ
ಜಲಮೆನಿಪ ಪರಿಶುದ್ಧತಿಳಿಜಲದಿಂ ತೀರಕೆ ಬಡಿಯುತಿರ್ಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲೆಗಳ ಸಪ್ಪಳದಿಂ, ಮನೋಹರಮಾಗಿರ್ಪ
ಅಂಜನಾದ್ರಿ, ಮಲಯಾದ್ರಿ ಮೇಣ್ ಮಾತಂಗ ಪರ್ವತ
ಗಳಿಂದಾವೃತಮಾಗಿ, ತ್ರೈತಾಯುಗದ ದಾಶರಥಿ
ರಾಮಾನುಜರು ಸೀತಾನ್ವೇಷಣಕೆ ಸರೋವರದ ದಂಡೆಯ
ಮೇಲೆ ಮಗುಳ್ದು ಬರುತಿರ್ಪಸೆನೆ ಅಭಿರಾಮನಿಸರ್ಗಮೆ,
ಸಜ್ಜಾಗಿ ಎದುರ್ಗೊಳ್ವವೊಲು ಶೃಂಗಾರಲಾಸ್ಯದಲಿ
ತೂಗಾಡುತಾ ಇಂದ್ರವರ್ತುಲಮಾಗಿ
ಕಂಗೊಳಿಸುತಲಿರ್ಪುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಸಂತೋತ್ಸವ

ಮೂಡಲ ಬಾನಲಿ ಅರುಣನ ಛಾಯೆಯು ಆವುದೊ
ಮೋಡಿಯ ಮಾಡುತಿದೆ
ಎಲ್ಲಿ ನೋಡಿದರಲ್ಲಿ ಗಮಗಮ ಹೂವ ತೇರೇ ಕಂಡಿದೆ
ಹಸುರ ಹಾಸನು ಹಾಸಿದೆ
ಹಿಮದ ಮಣಿಯಲಿ ತೊಯ್ದು ಹೊನ್ನಿನ ಜಾಡ ಗುರುತಿಸಿ
ಹೋಗುವೆ
ಸುಂದರ ಬನದ ಸಿರಿಯೊಡೆತನದ ಉತ್ಸವ ಮೂರುತಿಯಲ್ಲಿಗೆ ॥೧॥

ದಿವ್ಯ ಸೃಷ್ಟಿಗೆ ತಲೆಯ ತೂಗುತಾ ತೆಂಗು ಕೌಂಗುತಾ ಬಗ್ಗಿವೆ
ಆವ ಶಿಲ್ಪಿಯು ಕಡೆದನೆಂದು ಹರಿಣಿ ದಿಟ್ಟಿಯ ನೆಟ್ಟಿದೆ
ವಿಶ್ವ ಕೌತುಕವರ್ಥವಾಗದೆ ಕವಿಯ ನಿಮಿರಿಸಿ ನಿಂತಿದೆ
ಹರಿಣತಿಂಥಿಣಿ ಬೆರಗುಗಣ್ಣಲಿ ಮೇವ ಮೆಲ್ಲುದ ಮರೆತಿದೆ ॥೨॥

ಹರಿದಿಹ ಹಾವ್ಗಳ ಸಡಗರದಲ್ಲೂ ಕಂಡಿವೆ ಚೈತ್ರನ ಮುಂಗುರುಳು
ಹುಡುಕುತ ಹಾರುತ ಮರೆಯಾಗುತಲಿ ಬಿಸಿಲಲಿ ಮೂಡಿವೆ
ಮಿಂಚುಗಳು
ಹುಲ್ಲ ಮೇಯದೆ ಗೋವುಗಳೆಲ್ಲ ಕವಿಯು
ನಿಮಿರಿಸಿ ಒಡ್ಡಿವೆ
ಋತುಗಾನ ಗೀತಮದೆಲ್ಲಿಯೋ ಜಗವ ಮರೆತೇ
ನಿಂತಿವೆ ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಆವ ಉತ್ಸವ ನಡೆಯುತಿಹುದೋ ಎಲ್ಲಿ ಇಹುದೋ ಎನ್ನುತಾ
ಗಗನ ಮಾರ್ಗದಿ ಪಕ್ಷಿ ಸಂಕುಲ ಹಾಡಿ ಕಲರವಗೈದಿವೆ
ಭಾಗಿಯಾದೊಡೆ ಜೀವ ಸಾರ್ಥಕಮೆಂದು ರವ್ವನೆ ಹಾರಿದೆ
ತರುಲತೆಯೆಲ್ಲವು ಚಿಗುರನೊಡೆಯುತಾ ಪುಷ್ಪವೃಷ್ಟಿಯ ಕರೆದಿದೆ
ಈ ವಸಂತ ಗಾನಕೆ ಭ್ರಮರ ತಿಂಥಿಣಿ ರಸಗಾನ ನೃತ್ಯವಗೈದಿದೆ ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತ—ಒಂದು ಅದಮ್ಯ ಚೇತನ

ಇದು ಭಾರತ ಹಸಿರು ಜಡೆ ಹೆಣೆದ ಜಡ್ಡುಗಟ್ಟಿದ ಅಲ
ತುಳಿತ ಹೊಡೆತಕ್ಕೆ ಸಿಕ್ಕಿಯೂ ನಲುಗದು ಎದುರಾಳಿಯೆ ಇದ್ದರೂ ಕಾಲ
ಶತ ಶತಮಾನ ಪ್ರಹಾರಕೂ ಜಗ್ಗದ ವಜ್ರಕಠಿಣ ದೇಹವೀ ಕಾಂಡ
ಚಿಗುರ ಸಣ್ಣ ಟೊಂಗೆಯೂ ಬಲಿತು ಕಟಠರವಾಗಿಹ ಕಾಂಡ
ಕೆಂಧೂಳನೆಬ್ಬಿಸುತಿಹ ಬುಸುಗುಟ್ಟುವ ಹಗೆಯ ಕಾವಿನ ಪಿತ್ತ
ಬುಡದಲೆ ಇಹುದು ನಳನಳಿಸುತಿಹ ವಿಷ ಸರ್ಪಗಳ ಹುತ್ತ
ತಮ್ಮಲೇ ತರಿದಾಡುವ ಕಟುಕ ಕಾಡುಮೃಗಗಳ ಕಾದಾಟ
ಗೊರಸಲಿ ಒದೆಯುತ ದೀನ ಮಿಕವ ತೊತ್ತಳದುಳಿಯುವ ನೋಟ
ಬಡಗೆವ್ವಲೂ ಬಿಡದೆ ಸಿಕ್ಕ ಜಡ ಬೇರಿನ ಬುಡವನೆ ಜಗಿಯುವ ಆಟ
ಸಾಗುತಲಿದೆ ಹೀಗೆಯೇ ಜೀವನದ ಹೊಸಕಾಟ ಮಿಡುಕಾಟ
ಜೀವರಸ ಮೇಲೇರುತಲಿದೆ ಎತ್ತರ ಅತಿ ಎತ್ತರಕೂ ಪಸರಿಸಿದೆ
ಮೇಲೆ ಕಂಪಿಸಿಹ ಒಂದೊಂದು ಕಿರು ಟೊಂಗೆಯು ಬಳಿಯೂ ಉಸುರಿದೆ
ಕೊನರಿಡಿಸಲು ನಗಿಸಲು ಹವಣಿಕೆ ನಡೆಸುತ ಮಾಡಿದೆ ಜತನ
ನೇಸರ ಆಶಾರಶ್ಮಿಯನೋಲೈಸುತ ನೀಡಿದೆ ಹಾರ್ದಿಕ ಆಮಂತ್ರಣ
ರೆಂಬೆ ಕೊಂಬಿಗಳ ತೋರಿಸಿ ಕೂಗಿಕರೆಯುತಿದೆ ಪಕ್ಷಿ ಸಂಕುಲದ
ನಿಜ ತನ್ಮಯ ರಾಗದೆ ಹಾಡಲು ಕಾಲನ ಕಠೋರ ಸತ್ಯದ ಸಂಭವ
ಜರ್ಝರಿತವಾಗದೆ ನಿಂತಿಹುದು ಅಚಲಿತವಾಗಿ ಅದಮ್ಯ ಶಕ್ತಿಯ ಹೇರು
ಅನೂಹ್ಯ ನಮ್ಮ ಭಾರತವು ಧರ್ಮ ಸಹಿಷ್ಣುತೆ ಶಾಂತಿ ಸಹನೆ
ಕೀರ್ತಿಯ ಪೇರು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಲೆಯು ಸುರುಳಿ

ದೇಶದ ಉದ್ದಗಲಕ್ಕೂ ಏರುತಿದೆ ಸುರುಳಿ
ಮಧ್ಯೆಸಿಕ್ಕಿ ಸಾಯುತಿಹನು ಜನಸಾಮಾನ್ಯ ನರಳಿನರಳಿ
ಸುತ್ತೈಸುತಿಹನು ಪುಡಾರಿಯು ಬಳಿಯುತ ರಾಜಕೀಯದ ಬಣ್ಣ
ಉದ್ದನಾಗಿರುವುದರಿಂದಲೇ ಈತ ಕಾಣುವನು ಅತಿಸಣ್ಣ
ದಪ್ಪವೇ ಕಾಣದು ಈ ಪಾಟಿ ಉದ್ದದಲಿ
ಸಂಕೋಚನವೇ ಕಾಣದ ಈ ಮಾಂತ್ರಿಕ ಸುರುಳಿ
ತಪ್ಪದೇ ನಡೆಯುತ್ತಿರುವುದು ಚುನಾವಣೆ ಒಂದೇ
ಮತಹಾಕಿ ನಿಜಕೂ ನಾಮಹಾಕಿಸಿಕೊಳ್ಳುವ ನಾವು ಕುರಿಯಮಂದೆ !
ಸುರುಳಿಯನು ಕುಗ್ಗಿಸುವೆವು ನಾವು
ನಿಮಗೆ ಉಸಿರಾಟ ಕೂಡಿಸುವೆವು
ಊಟ ಕಾಣಿಸುವೆವು ಮನೆ ಕಟ್ಟಿಸುವೆವು
ರಾಮರಾಜ್ಯದ ಕನಸು ನನಸಾಗಿಸುವೆವು
ಎಂದಾತ ಹೇಳಿದ ಮಾತು ನಿಜವಾಗಿಹುದು
ಊಟವಾಡಿಕೊಂಡ ! ಮನೆಗಳನು ಕಟ್ಟಿಕೊಂಡ !
ಅಹುಮು, ರಾಜಕಾರಣಿಯೆ ರಾಮ ! ಹೆಂಡತಿ ಸೀತೆಯಂತೆ
ರಾಜ್ಯವೆಲ್ಲ ಅವನದೇ ರಾಮರಾಜ್ಯದಂತೆ
ಚುನಾವಣೆಯ ನಂತರ ಈ ತೆರನೆ ಒಂದೊಂದು
ಪಕ್ಷ ಒಂದೊಂದು ಕೈ ನೋಡುವುದು
ಸುರಳಿ ಮಾತ್ರ ಕುಗ್ಗದೆ ಹೀಜಿ, ತಲೆಯೇ ಮೇಲೆಗರಲಿದೆ
ಹೊಲಸು ರಾಜಕೀಯದ ವಿಕಟ ಕರಾಳ ನಗೆ ಏಳಲಿದೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಳುಹಂಪೆಯ ಉಗ್ರನೃಸಿಂಹ

ಹೇ ಉಗ್ರನೃಸಿಂಹ ಏನಿದವಸ್ಥೆ !
ದುಷ್ಟರ ಶಿಕ್ಷಕನಾಗಿಯೂ ಇನಿತೇ
ಶಿಷ್ಟರ ರಕ್ಷಕ ಸುಂದರ ಮೂರ್ತೇ
ಕೈ ಕಾಲಿಲ್ಲದೇ ನೀ ಏಂ ಕುಳಿತೆ

ಭಂಗವ ಮೊಡಿದ ಪಾಪಿಯು ಯಾರೋ
ಐದಾಳೆತ್ತರ ಕುಳಿತಿಹೆ ಏಕೋ
ಅರ್ಭಕನಂದದಿ ಎಲ್ಲವ ಸಹಿಸಿ
ಪಾಪಿಯ ಬಿಡಿಸಿಹೆ ಜನಗಳ ಮರೆಸಿ

ಹೇ ! ಚರಾಚರ ವಸ್ತುವ ಪೊರೆವಾತನೆ !
ಹುಲುಮನುಜ ಪಾಪಿಗೇಂ ಬಲಿಯಾದೇ
ಜನರಿಗೆ ಮರುಕವ ತೋರುತ ಸಲುಹುವ
ನಿನಗೇ ಮನುಜರು ಮರುಗುವಂತಾಯ್ತೇ

ನಿನ್ನನು ನೀನೇ ರೆಕ್ಷಿಸಿಕೊಳ್ಳದೆ
ಎಮ್ಮನು ನೀ ರಕ್ಷಿಸಲಾಪುದೇ
ಎನ್ನವಾಜನಕೆಲ್ಲಿದೆ ಉತ್ತರ
ತ್ವರೆಮಾಡೈ ಓ ಭಂಗನೃಸಿಂಹ !

ಕಡುಪಾಪಿಗೂ ನೀ ದಯಾಮಯನೆಂದು
ಲೋಕಕೆ ಪ್ರಕಟಿಪ ವೈಖರಿಯೆಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮರೆಳೆ ಜನಕ್ಕರಿವಾಗುವುದೆಂದೋ
ಆದಿಯು ಅಂತ್ಯವು ನಿನಗಿಲ್ಲವು ಎಂದು !

ತಲೆ ಮೇಲಿಯೂ ಕಿಡಿಕಾರುವ ಜನ
ಮುಗುದ ಮಾನವಗೆ ಮಾಡರು ಏನ
ಎನ್ನುತ ಲೋಕಕೆ ಸಾರಲು ಎಂದೇ
ತಿರುವಿನ ತೆರದಲಿ ಸುಮ್ಮನೆ ಕುಳಿತೆ

ಘಾಸಿಯಾದರೂ ನಿನ್ನದೆ ವಿಜಯ
ವಿಗ್ರಹ ಒಡೆವಗೆಂದೂ ಅಪಜಯ
ನಿರ್ನಾಮ ಮಾಡಲು ಹೊರಟವ ಅಲ್ಲೇ
ಕೈಲಾಗದೆ ಬಿಟ್ಟಿಪ ಮಧ್ಯದಲೇ !

ಆ ವಿಗ್ರಹಭೇದಕ ಚರಿತೆಯಲಿ
ಅನಾಮಿಕನಾಗಿಹ ಮಣ್ಣ್ಹೊಳಿಯಲಿ !
ಭಿನ್ನನಾಗಿಯೂ ಕೃಪಾಕರ ನೀ !
ಜಗವನೆ ಕೃಪೆಯಿಂ ಸೆಳೆದಿಹೆ ನೀ !

ಕೈ ಕಾಲ್ಗಳ ಕಸಿ ನಿನಗದು ಸಲ್ಲ
ಜಗಕರಿವಾಗಲಿ ಸತ್ಯವು ಎಲ್ಲ
ಈ ತೆರ ಪದನಲೂ ನೀನೆ ಅಮರ
ಪಾಪಿಯ ಪೂನ್ಯತೆ ಲೋಕಕೆ ಸಾಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕ ಶಿಲ್ಪ ವೈಭವ

ಕಲೆಯನಾರಾಧಿಸುವ ತವರು ಕನ್ನಡನಾಡು
ಸಂಗೀತ ಸಾಹಿತ್ಯನೃತ್ಯಕಲೆಗಳ ಬೀಡು
ಚೆಲುವ ಸೋಮನಾಥಪುರ ಬೇಲೂರು ಹಳೆಬೀಡು
ರೂವಾರಿ ಜಕ್ಕಣನು ಜನಿಸಿ ಮೆರೆದಿಹನಾಡು ॥೧॥

ಹೊಯ್ಸಳರ ಜೀವನದ ನಾಡಿಮಿಡಿತವು ಹೆಪ್ಪುಗಟ್ಟಿಹುದಿಲ್ಲಿ ಶಿಲೆಯ ಬಲೆಯಲ್ಲಿ
ಆಧುನಿಕತೆಯು ಅಂದಿನ ಅನುಕರಣೆ ಎಂಬರಿವು ಮೂಡುವುದೇ ಇಲ್ಲಿ ಈ ಕಲ್ಲಿನಲಿ
ಕಣ್ತುಂಬ ಶಿಲಾವೈಭವ ಸಾರುತಿಹ ದೇಗುಲಗಳು ಪ್ರಾಸಾದಗಳು
ನಿತ್ಯನೂತನವಾಗಿಹ ಗುಡಿಗೋಪುರಗಳು ಬಿತ್ತರ ಪ್ರಾಕಾರಗಳು ॥೨॥

ಲಲನೆಯರ ಬಿಡಗು ಕಂಗಳ ನೋಡ ಅಂಗಸೌಷ್ಠವ ನೋಡ
ಅಲ್ಲಿಯೇ ಮೇಲಿರುವ ಕದಳಿ ದಳ ಬಿಡಿಸಿದ ಕುಸುರಿಗೆಲಸ
ವಿವಿಧ ಭಂಗಿಯಲಿ ನಾಟ್ಯವಾಡುತಿಹ ನಾಟ್ಯಮಯೂರಿಯಿವಳು
ನರ್ತನ ಶಾಸ್ತ್ರದ ಸಕಲ ಭಂಗಿಯ ತೋರಿ ವಿಶಾರದೆ ಎನಿಸಿಹಳು ॥೩॥

ಸುಂದರಿಯೋರ್ವಳು ನಿಂತಿಹಳು ಹಾವ ಭಾವದಿ ಬಳುಕುತಲಿ
ಎಡಗೈಯಲಿ ದರ್ಪಣ ಪಿಡಿದಿಹಳು
ತನ್ನಯ ಚಂದಕೆ ತಾನೇ ಮೈಮರೆಯುತಲಿ
ನೋಡುತ ಶಿಲೆಯಾಗಿಯೇ ದರ್ಪಣ ಸುಂದರಿ ಎನಿಸಿಹಳು ॥೪॥

ಶರದೃತುವಿನ ಕಾಲಮೇಘಂಗಳ ನಾಚಿಸುವ ಸೌಂದರ್ಯದಲಿ
ಶುಭ್ರ ಕಾಲವರ್ಣದೆ ಮಿಂದು ನಿಂದಂತಿಹರು ಈ ಕೃಷ್ಣೆಯರು
ವಿವಿಧ ಸುಂದರ ಕೇಶ ವಿನ್ಯಾಸ ಸಿದ್ಧಿಯ ಪಡೆದ ದ್ಯೋತಕವಾಗಿ
ನಾಗವೇಣಿ ಪತಂಗವೇಣಿ ಹಯಲಾಂಗೂಲ ಚಿತ್ರ ವಿಚಿತ್ರವೇಣಿಯರಾಗಿ ॥೫॥

ಶುಕ ಭಾಷಿಣಿಯೆ ನೋಡ ಸಾಲಾಗಿ ನಿಂತಿಹ ಲಲನೆಯರ ನೋಡಾ
ಕವಿಯಲಿ ಧರಿಸಿಹ ಬೆಂಡೋಲೆ ನೀಳೋಲೆ ಕೆನ್ನೆಸರಪಳಿಯ
ಮುತ್ತೋಲೆ ಹರಳೋಲೆ ಆಭರಣಗಳ ಸುಂದರ ಸರಮಾಲೆ
ನಡುವಿನ ಡಾಬು ಕಾಲಂದುಗೆ ವಿಧವಿಧ ಸರ್ವಾಭರಣಗಳ ॥೬॥

Sri Vidyabharathi Book Centre, Sringeri

CC-O. In Public Domain. Digitized by eGangotri



ನರ್ತಕಿ : ವಿವಿಧ ಭಂಗಿಯಲಿ ನಾಟ್ಯವಾಡುತಿಹ ನಾಟ್ಯಮಯೂರಿಯಿವಳು.
ಕೃಪೆ : ಪ್ರಾಚ್ಯ ವಸ್ತು ಸಂಗ್ರಹಾಲಯ ಮೈಸೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



ದಿವ್ಯನರ್ತಕಿ ದೇವನೊಲಿಸಬಂದ ಸ್ವರ್ಗನರ್ತಕಿಯಿವಳು

Sri Vidyaranya Book Centre, Sringeri

ಕೃಪೆ : ಪ್ರಾಚ್ಯ ವಸ್ತು ಸಂಗ್ರಹಾಲಯ ಮೈಸೂರು.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸುರಾಂಗನೆ : ಮಿಂದು ಜಡೆಯ ತೊಳೆವ ದೇವಕನ್ನಿಕೆಯಿವಳು.

ಕೃಪೆ : ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವೀಣಾಪಾಣಿ : ವೀಣಾವಾದನದೆ ಮೈಮರೆತ ಅಪ್ಸರೆಯಿವಳು
ವೀಣೆಯನು ನುಡಿಸುತ್ತ ತನ್ನನೇ ಮರೆತಿಹಳು.
ಕೃಪೆ : ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕಪಿಕಪಿತೆಯೆ ಭಯ ನಾಚಿಕೆಯ ಭಾವ
ಸ್ಪೃಶ್ಯಿಕ ಭೀತೆಯ ಮೊಗದ ಭೀತಿಯ ಭಾವ
ನೊಣದ ಮೇಲೆರಗಲಿಹ ಹಲ್ಲಿಯ ನಿಚ್ಚಳಗಮನ
ಕಿರು ಅಂಕಣದಿ ನಿಂತಿಹಸ್ತಂಭ ಜಕ್ಕಣನ ಜಾಣ್ಮೆಯ ಬಿಂಬ ॥೭೭॥

ನಾಟ್ಯವಾಡುತಾ ನಿಂತ ಬೆಡಗಿಯ ನೋಡು ನೀ
ತೋರು ಬೆರಳಂಚಿನಿಂ ಜಾರಿಹುದುನೀರ್ಪನ
ನಾಸಿಕಾಗ್ರವತಗುಲಿ ಅವಳ ಮಂಡಿಗೆ ಚುಂಬನ
ಪಾದಾಂಗುಲಿಗೆ ಸ್ಪರ್ಶ, ಶಿಲ್ಪಪ್ರಜ್ಞೆಯ ಪ್ರತಿಫಲನ ॥೭೮॥

ಕೇಶವನೊಲಿಸಲು ಬಂದ ಸ್ವರ್ಗ ನರ್ತಕಿಯಿವಳು
ಮಿಂದು ಜಡೆಯನು ತೊಳೆವ ದೇವಕನ್ನಿಕೆಯಿವಳು
ವೀಣಾವಾದನದೆ ಮೈಮರೆತ ಅಪ್ಸರೆಯಿವಳು
ವೀಣೆಯನು ನುಡಿಸುತ್ತ ತನ್ನನೇ ಮರೆತಿಹಳು ॥೭೯॥

ನಿತ್ಯದೇಳು ಬೀಳುಗಳು ಶಿಲ್ಪ ವರ್ಣಿತವಿಲ್ಲಿ
ಜಗವ ಕಾಯ್ವನ ಕೃಪಾಲೀಲೆ ಮೆರೆದಿಹುದಿಲ್ಲಿ
ಪುರಾಣ ಘಟನಾವಳಿ ಶಿಲೆಯಲ್ಲಿ ಬಿಂಬಿಸಿವೆ
ಬೆಲು ಚೆನ್ನಕೇಶವನ ಕೃಪೆಯೆಂದು ಸಾರುತಿವೆ ॥೮೦॥

ಸಪ್ತಸ್ವರ ಶ್ರುತಿಪ ನುಣ್ಪು ಕಾಲಸ್ಥಂಭಗಳೇ ಹೇಳಿರಿ ನೀವು
ನೃತ್ಯವೇದಿಕೆಯ ಮೇಲೆ ಶಾಂತಲೆಯು ಎಲ್ಲಿಹಳು
ಮಾನಸ ಸಂಗೀತದಲಿ ತೇಲುತಲಿ ಹಗಲು ಸರಿಯುತ ಇರುಳು ಕವಿಯಿತು
ತನ್ಮಯನಾದೆ ಹೆದರಿದೆ ! ಕಳೆಯಬಹುದು ಹೀಗೆಯೇ ವರುಷಗಳು ! ॥೮೧॥

ಸಗ್ಗವನೆ ಶಿಲ್ಪದಲಿ ಸೆರೆಹಿಡಿದ ಬ್ರಹ್ಮನಿವ
ಕರ್ನಾಟಕದ ಧವಳ ಕೀರ್ತಿಯ ರೂವಾರಿಯು
ಹೊಯ್ಸಳರನು ಅಚಂದ್ರಾರ್ಕವಾಗಿಸಿದ ಅಮರ ಜ್ಯೋತಿಯಿವ
ಜಕ್ಕಣನು ಭುವಿಯೊಳಗೆ ಕ್ಷಣಮಿಂಚಿ ಮರೆಯಾದ ವಿಶ್ವಕರ್ಮನ ಅಂಶವು ॥೮೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಡ ಹಿರಿಯ ಕವಿ-ಸಾಹಿತಿಗಳ ದೃಷ್ಟಿಯಲ್ಲಿ 'ಕಾವ್ಯ ನಿಸರ್ಗ'

ಗೇಯದ ರೆಕ್ಕೆಯನ್ನೇರಿ ಹೊರಟ ಭಾವಗಳ ವರ್ಣರಂಜಿತ ಮೆರವಣಿಗೆಯನ್ನು ಈ ಗೀತ ಸಂಕಲನದಲ್ಲಿ ಕಾಣುತ್ತೇವೆ. ಕವಿಯನ್ನೊಲಿಸಿಕೊಳ್ಳುವ ವಿಶೇಷಗುಣ ಇಲ್ಲಿನ ರಚನೆಗಳಿಗುಂಟು. ಕವಿತೆಯ ಒಂದು ಹಂತದ ಮೇಲೆ ಹಿಡಿತ ಸಾಧಿಸಿದ್ದಾನೆ, ಶ್ರೀ ಶೇಷಾದ್ರಿಯವರು.

ಸಿ. ಪಿ. ಕೆ.

ಶ್ರೀ ಶೇಷಾದ್ರಿಯವರು ಪದ್ಯ ರಚನೆಯಲ್ಲಿ ಉತ್ಸಾಹವುಳ್ಳವರು. ತಮ್ಮ ಆಲೋಚನೆ, ಭಾವನೆ, ಕಲ್ಪನೆಗಳನ್ನು ಪದ್ಯರೂಪದಲ್ಲಿ ಹಿಡಿದಿಡಬೇಕೆಂಬ ಹಂಬಲದಿಂದ ಅವರು ಮಾಡಿದ ಪ್ರಯತ್ನದ ಫಲ, ಈ "ಕಾವ್ಯ ನಿಸರ್ಗ" ವೆಂಬ ಪದ್ಯ ಸಂಗ್ರಹ. ಇದರಲ್ಲಿ ಕೆಲವನ್ನು ಹಾಡಿನ ರೂಪದಲ್ಲಿ ಬರೆಯಲಾಗಿದೆ. ಸೃಜನಾತ್ಮಕವಾದ ಅನುಭವ ಶೋಧನೆಯ ದಿಕ್ಕಿನತ್ತ ಹೆಜ್ಜೆ ಹಾಕುವ ಪ್ರಯತ್ನಗಳ ಹಲವಾರು ಬಗೆಗಳುಂಟು. ಅವುಗಳಲ್ಲಿ ಇದೂ ಒಂದು.

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಶ್ರೀ ಎಚ್. ಶೇಷಾದ್ರಿಯವರ ಕವಿತೆಗಳು ಹಾಗೂ ಗೀತೆಗಳನ್ನು ಓದಿದಾಗ ಕವಿಗಿಂಪಾಗಿ ಹಾಡಿದರೆಷ್ಟು ಸೊಗಯಿಸುತ್ತವೆ ಎಂಬ ಭಾವನೆ ನನ್ನಂತೆಯೇ ಇತರರಿಗೂ ಬರುವುದು ಸಹಜ. ಹಲವು ಹತ್ತು ಘಟನೆಗಳಿಗೆ ಸ್ಪಂದಿಸುವ, ಪ್ರಕೃತಿಯ ಚೆಲುವಿಗೆ ಮಾರು ಹೋಗುವ, ಬದುಕನ್ನು ಕುತೂಹಲದ ಕಣ್ಣುಗಳಿಂದ ನೋಡುವ, ಅರಸಿ ಅರ್ಥವನ್ನು ಪಡಕೊಳ್ಳಲು ಪ್ರಯತ್ನಿಸುವ ಕವಿ ಹೃದಯವುಳ್ಳ ಶ್ರೀ ಶೇಷಾದ್ರಿಯವರು ಅಭಿವ್ಯಕ್ತಿಯಲ್ಲಿ ಯಾವ ಒಂದು ನಿಯಮಕ್ಕೂ ಬದ್ಧರಾಗಿಲ್ಲ. ಬರಿಯ ಭಾವ ಗೀತ ಲಹರಿ ಲಹರಿಯಾಗಿ ಹರಿದು ಬಂದಿದೆ. ಜಾನಪದ ಧಾಟಿಗಳೂ ಸಂಗೀತದ ರಾಗಗಳೂ ಇಲ್ಲಿ ಜತೆಗೂಡಿವೆ. ಗೀತೆಗಳಂತೂ ತುಂಬ ಸೊಗಸಾಗಿವೆ! ಹಾಡಿನ ರೂಪದಲ್ಲಿ ಕೇಳಲು ಸುಂದರವಾಗಿವೆ!

ಎಸ್. ಅನಂತನಾರಾಯಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೇಷಾದ್ರಿಯವರು ದೂರವಾಣಿಯಲ್ಲಿದ್ದರೂ ಕಾವ್ಯಕ್ಕೆ ಹತ್ತಿರ. ಅವರು ತಮ್ಮ ಸುತ್ತಮುತ್ತ ಇರುವ ಪ್ರಕೃತಿಯ ಸೌಂದರ್ಯವನ್ನು ಸವಿಯಬಲ್ಲರು, ದುಃಖಿತರ ನೋವನ್ನು ಅರಿತು ಮರುಗಬಲ್ಲರು, ಸಮಾಜದ ದೋಷಗಳನ್ನು ಗುರುತಿಸಬಲ್ಲರು. ಮುಖ್ಯವಾಗಿ ಕಾವ್ಯದ ರೂಪ ಕೊಡಬಲ್ಲರು. ಅವರ ಕವನಗಳಲ್ಲಿ ಸಂಚರಿಸುವ ಭಾವಗಳನ್ನು ಸ್ಥೂಲವಾಗಿ ನೋಡಿದಾಗ ದೇಶಪ್ರೇಮ, ಏಕತೆಯ ಬಗ್ಗೆ ಆಶಾವಾದ, ಪರಂಪರೆಯ ಪ್ರಜ್ಞೆ ಮುಂತಾದುವು ಸೌಂದರ್ಯಪ್ರಜ್ಞೆಯ ಜೊತೆಗೆ ಕಾಣಿಸಿಗುತ್ತವೆ.

ಡಾ|| ಪಿ. ಎಸ್. ರಾಮಾನುಜಂ

ಶ್ರೀ ಶೇಷಾದ್ರಿ ಅವರು ತುಂಬ ಉತ್ಸಾಹಿ ತರುಣರು. ಲೋಕವನ್ನು ತೆರೆದ ಕಣ್ಣು ಮತ್ತು ತೆರೆದ ಮನಸ್ಸುಗಳಿಂದ ನೋಡಿ ತಮ್ಮ ಪ್ರತಿಕ್ರಿಯೆಯನ್ನು ರೂಪಿಸಿಕೊಳ್ಳುತ್ತಿರುವ, ಆದರೊಡನೆ ಸಕ್ರಿಯವಾಗಿ ಸ್ಪಂದಿಸುತ್ತಿರುವ ಅವರ ಚೇತನ ನಮಗೆ ಉತ್ತಮವಾದುದನ್ನು ಕೊಡಬಹುದೆಂಬ ನಂಬಿಕೆಯನ್ನು ಮೂಡಿಸುವಂಥ ಕೆಲವು ಕವನಗಳು ಇಲ್ಲಿವೆ. ಅಂಥ ಅವರ ಒಂದೆರಡು ಕವನಗಳನ್ನು ಆಯ್ದು 'ಪ್ರಬುದ್ಧ ಕರ್ನಾಟಕ'ವೂ ಪ್ರಕಟಿಸಿದೆ.

ಪ್ರಧಾನ್ ಗುರುದತ್

Sri Vidyabharathi Book Centre, Sringeri

CC-O. In Public Domain. Digitized by eGangotri

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
1	8	ಯುಗಗಳ	ಯುಗಗಳಿ
3	11	ಒಂದೆಯಾದರೂ ಒಂದೆ	ಒಂದೆಯಾದರೂ
4	13	ಅ ಭಕ್ತಿ	ಆಭಕ್ತಿ
5	2	ಭಿಕ್ಷಕ	ಭಿಕ್ಷುಕ
5	14	ರಾತ್ರಿಯಲಿ	ರಾತ್ರಿಯಲ್ಲಿ
6	14	ಆ ಮಾರ	ಆಮಾರ
7	6	ಗಿಡಗಳ್ಹೂವ	ಗಿಡಗಳ್ ಹೂ
7	14	ಕೆಂಪು	ಕಂಪು
9	4	ಸ್ವರ್ಗವ ನೀ ಧರೆಗೆ	ಸ್ವರ್ಗವನೀಧರೆಗೆ
12	9	ಏಳ	ಏಳು
12	13	ಮಿನುಗು ತಾ	ಮಿನುಗುತಾ
14	7	ಸಮಾಜ	ಸಮಾನ
14	9	ಪೊಗೆಯನ್ನಟ್ಟುತ	ಹೊಗೆಯನಟ್ಟುತ
17	14	ಮೊಗದಾಗಳವೆ	ಮೊಗದಾಗಳುವೆ
20	14	ಸೆರುವ	ಸೇರುವ
20	16	ಧಮನಿಯಲ್ಲರಿದಿಹ	ಧಮನಿಯಲ್ ಹರಿದಿಹ
25	19	ಮರು ಕಳಿಸಿದೆ	ಮರುಕಳಿಸಿದೆ
29	7	ಪ್ರಿಯತಮ ನಾವರಲ್ಲಿನೆಹನೋ	ಪ್ರಿಯತಮನಾರವನೆಲ್ಲಿಹನೋ
29	11	ಗಂಡನಪ್ಪೊಲು	ಗಂಡನವೊಲು
29	17	ಹರ್ಷಿಸಿತು	ಹರ್ಷಿಸಿತು
29	19	ಚಿಂದಳು	ಬಂದಳು
30	12	ಸುವಾಸಿತೆ	ಸುವಾಸಿತ
31	3	ಗಳಿಂದಾವೃತಮಾಗಿ	ಗಳಿಂದಾವೃತಮಾಗಿ
31	5	ಬರುತಿರ್ಪಸೆನೆ	ಬರುತಿರ್ಪರೆನೆ
34	15	ಸಂಕುಲದ	ಸಂಕುಲವ
35	14	ಊಟ ಮಾಡಿಕೊಂಡ	ಊಟಮಾಡಿಕೊಂಡ
35	20	ಸುರಳಿ	ಸುರುಳಿ
36	13	ರೆಕ್ಷಿಸಿಕೊಳ್ಳದೆ	ರಕ್ಷಿಸಿಕೊಳ್ಳದೆ
38	3	ಚಿಲು	ಚೆಲು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಎಚ್. ಶೇಷಾದ್ರಿ

ತಮ್ಮ "ಕಾವ್ಯನಿಸರ್ಗ" ಕವನ ಸಂಕಲನದಿಂದ ಕನ್ನಡ ಸಾರಸ್ವತ ಲೋಕವನ್ನು ಪ್ರವೇಶಿಸುತ್ತಿರುವ ಎಚ್. ಶೇಷಾದ್ರಿ ಅವರು ತರುಣ ಕವಿ. ಇವರದು ಸುಸಂಸ್ಕೃತ ವಾದ ಮನಸ್ಸು.

ಮೈಸೂರು ಜಿಲ್ಲೆಯ ತಲಕಾಡಿನಲ್ಲಿ ಜನಿಸಿದ ಎಚ್.ಶೇಷಾದ್ರಿ ಅವರು ಮೈಸೂರಿನ ದೂರವಾಣಿ ಕೇಂದ್ರದಲ್ಲಿ ಉದ್ಯೋಗಿಯಾಗಿದ್ದಾರೆ. ದೈನಂದಿನ ಕರ್ಮಕಾಂಡದ ಏಕತಾನದ ಹಿನ್ನೆಲೆಯಲ್ಲಿ ಇವರ ಕಾವ್ಯದ ಕಿನ್ನರಿ ಜೀವಂತವಾಗಿ ಮಿಡಿಯುತ್ತಿದೆ. ಇದೊಂದು ವಿಶೇಷ. ಸಹೋದ್ಯೋಗಿಗಳೇ ಇವರ ಪ್ರತಿಭೆಗೆ ಪ್ರೋತ್ಸಾಹದ ಫ್ಲೀರೆರೆದು ಪೋಷಿಸುತ್ತಿರುವ ಅಭಿಮಾನಿ ವೃಂದ.

ಹೊಸಗನ್ನಡ ಕಾವ್ಯದ ರತ್ನತ್ರಯರಲ್ಲೊಬ್ಬರಾದ ಹಿರಿಯ ಕವಿ ಪು.ತಿ.ನ. ಅವರ ಹರಕೆ ಪಡೆದಿರುವುದು ಶೇಷಾದ್ರಿಯವರ ಮಹಾಭಾಗ್ಯ. ಅವರು ಹೇಳಿರುವಂತೆ ಶೇಷಾದ್ರಿಯವರು ಪ್ರಕೃತಿಯ ಚೆಲುವನ್ನು ನೋಡಿ ಸುಖಪಡಬಲ್ಲರು, ಪ್ರಕೃತಿಯ ದಾರುಣತೆಯನ್ನು ಕಂಡು ಮರುಗಬಲ್ಲರು. ಪ್ರೀತಿ, ಸ್ನೇಹ, ವಿನೋದ, ವಿಷಾದಗಳ ನಡುವೆ ತೂಗುಯ್ಯಾಲೆಯಾಡುತ್ತವೆ, ಶೇಷಾದ್ರಿಯವರ ಕವನಗಳು. ಮನಸ್ಸಿನಲ್ಲಿ ಸಾಮಾನ್ಯವಾಗಿ ಹಾದುಹೋಗುವ ಹಲವಾರು ಮಧುರ ಹಾಗೂ ವೇದನಾಮಯ ಭಾವಗಳು ಇಲ್ಲಿ ಹಾರ್ದವಾಗಿ ಮೈದಳೆದಿವೆ. ಇಲ್ಲಿಯ ಬಹುತೇಕ ಕವನಗಳು ಸರಳವಾದ ಹಾಡುಗಳ ಧಾಟಿಗಳಲ್ಲಿರುವುದರಿಂದ ನಿಪುಣ ಸಂಗೀತ ನಿರ್ದೇಶಕನ ಕೈಯಲ್ಲಿ ಇವು ಸುಶ್ರಾವ್ಯವಾದ ಧ್ವನಿಸುರುಳಿಗಳಾಗಿ ಅರಳಬಲ್ಲವು, ಶಾಶ್ವತವಾದ ಆನಂದ ನೀಡಬಲ್ಲುವು.

ಇಲ್ಲಿಯ ಕೆಲವು ಕವನಗಳು ಈ ಮೊದಲೇ 'ಕಸ್ತೂರಿ', 'ಪ್ರಬುದ್ಧ ಕರ್ನಾಟಕ' ಪತ್ರಿಕೆಗಳಲ್ಲಿ ಪ್ರಕಟವಾಗಿವೆ, ಮೈಸೂರು ಆಕಾಶವಾಣಿಯಿಂದ ಚಿತ್ರಿತಗೊಂಡಿವೆ, ಸಹೃದಯರ ಮೆಚ್ಚುಗೆ ಗಳಿಸಿವೆ.

Sri Vidyabharathi Book Centre, Sringeri